# ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038

ಕನ್ನಡ ದಿನಪತ್ರಿಕೆ
KANNADA DAILY




HAMPI TIMES No.1 Leading Local News Paper
85,000 E-PAPER READERS
94486 33038 NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201



ಸಂಪುಟ:02 Volume:02 • ಸಂಚಿಕೆ: 53 Issue: 53 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 21.08.2024 • ಬುಧವಾರ Wednesday • ಪುಟ:04 Page:04 • ಬೆಲೆ:2 Rs:2



ಮನಸ್ಸು ಮಾಡು ಕರ್ತವ್ಯ ನಿಷ್ಠನಾಗು ಕಾದು ನೋಡು

ಪುಟ: 4ರಲ್ಲಿ ನೋಡಿ

ಈ ಬಾರಿ SSLC ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ!
ವಿದ್ಯಾರ್ಥಿಗಳು ಹೆಚ್ಚು ಅಂಕಗಳಿಸಲು ಸುಲಭ ಮಾರ್ಗೋಪಾಯಗಳು
ದಿನಕ್ಕೊಂದು ವಿಷಯ ಹಂಪಿ ಟೈಮ್ಸ್ ಮಾರ್ಗದರ್ಶಿಯಲ್ಲಿ
SSLC ಪರೀಕ್ಷೆ ವಂಚಿತರು, ಆಕಾಂಕ್ಷಿಗಳು ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿನ ದಿನಕ್ಕೊಂದು ವಿಷಯಗಳನ್ನು ಓದಿಕೊಂಡು ಪರೀಕ್ಷೆಗೆ ಸಿದ್ಧಗೊಳ್ಳಲು
ಹಂಪಿ ಟೈಮ್ಸ್ ಮಾರ್ಗದರ್ಶಿ ಸಹಕಾರಿಯಾಗಲಿದೆ... ಇ-ಪೇಪರ್‌ನಲ್ಲೂ ಲಭ್ಯ...

HAMPI TIMES VIJAYANAGARA

ಹಂಪಿ ಟೈಮ್ಸ್ ಇ-ಪೇಪರ್

94486 33038 www.hampitimes.com / epaper.hampitimes.com Vijayanagara hampitimes@gmail.com

ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com


# ಸಮಾನತೆಯ ಹಾದಿಯಲ್ಲಿ ನಡೆಯೋಣ

## ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿಕೆ। ಡಿ.ದೇವರಾಜ ಅರಸು ರವರ 109ನೇ ಜನ್ಮ ದಿನಾಚರಣೆ
## ಕರ್ನಾಟಕಕ್ಕೆ ಅರಸು ಅವರ ಕೊಡುಗೆ ಅಪಾರ । ಬಡವರ ಬಗ್ಗೆ ಅಪಾರ ಕಾಳಜಿ ಹೊಂದಿದ್ದರು

■ **ಹಂಪಿ ಟೈಮ್ಸ್ ಹೊಸಪೇಟೆ**

ದಲಿತ ಪದ್ಧತಿ, ಜೀತ ಪದ್ಧತಿಗಳಂತ ಸಾಮಾಜಿಕ ಪಿಡುಗುಗಳನ್ನು ತೊಡಗಿಸಿ ಸಮಾನತೆಯ ಹಾದಿಯಲ್ಲಿ ನಡೆಯೋಣ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ವತಿಯಿಂದ ಆಗಸ್ಟ್ 20ರಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಡಿ.ದೇವರಾಜ ಅರಸು ರವರ 109ನೇ ಜನ್ಮ ದಿನಾಚರ ಣೆಯ ಕಾರ್ಯಕ್ರಮವನ್ನು ಉಧ್ಘಾಟಿಸಿ ಅವರು ಮಾತನಾಡಿದರು. ಕರ್ನಾಟಕದ ಮಾಜಿ ಮುಖ್ಯ ಮಂತ್ರಿಗಳಾದ ಡಿ.ದೇವರಾಜ ಅರಸು ಅವರು ಕರ್ನಾಟಕ ಕಂಡ ಧೀಮಂತ ನಾಯಕ. ಹೇಗೆ ಡಾ.ಬಿ.ಆರ್.ಅಂಬೆಡ್ಕರ್ ಅವರು ದೇಶಕ್ಕೆ ಅಪಾರ ಕೊಡುಗೆ ನೀಡಿದ್ದಾರೋ ಹಾಗೆ ಡಿ.ದೇವರಾಜ ಅರಸುರವರು ಕರ್ನಾಟಕ ರಾಜ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಎರಡು ಬಾರಿ ಮುಖ್ಯ ಮಂತ್ರಿಗಳಾಗಿದ್ದ, ಅವರು ಸಣ್ಣ ಗ್ರಾಮದಿಂದ ಬಂದಂತವರು, ಹುಟ್ಟುತ್ತಲೆ ಅರಸು ಮನೆತನದಿಂದ ಬಂದವರಾದರೂ ಬಡತನವನ್ನು ಕಣ್ಣಾರೆಕಂಡವರು.



ಡಿ.ದೇವರಾಜ ಅರಸು ಅವರು ಬಡವರ ಬಗ್ಗೆ ಅಪಾರ ಕಾಳಜಿ ಹೊಂದಿದವರಾಗಿದ್ದರು. ಚಳುವಳಿಗಳ ಮೂಲಕ ಸಾಮಾಜದಲ್ಲಿನ ದಲಿತ ಪದ್ಧತಿ, ಜೀತ ಪದ್ಧತಿಗಳನ್ನು ಹೋಗಲಾಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವರು. ಇಂತಹ ಮಹಾನ್ ವ್ಯಕ್ತಿಗಳ ಹಾದಿಯಲ್ಲೆ ನಾವೆಲ್ಲ ನಡೆಯೋಣ ಎಂದು ಹೇಳಿದರು.

ಜಿಲ್ಲಾ ಹಿಂದುಳಿದ ವರ್ಗಗಳ ಒಕ್ಕೂಟದ ಆಧ್ಯಕ್ಷರು ಹಾಗೂ ನಿವೃತ್ತ ಉಪನ್ಯಾಸಕರಾದ ವೈ. ಯಮುನೇಶ ಅವರು ವಿಶೇಷ ಉಪನ್ಯಾಸ ನೀಡಿ, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಬಹಳ ಕೊಡುಗೆ ನೀಡಿದ್ದಾರೆ. ಸಮಾಜದ ಏಳಿಗೆಗೆ ಅಪಾರ ಕಾಳಜಿ ಹೊಂದಿದ್ದ ಇವರು 1972 ರಿಂದ 1977ರವರೆಗೆ ಹಾಗೂ 1978–1980 ವರೆಗೆ ಎರಡು ಆವಧಿಗೆ ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದರು. ಡಿ.ದೇವರಾಜ ಅರಸು ಅವರು ತಮ್ಮ ಅವಧಿಯಲ್ಲಿ ರಾಜ್ಯದ ಅಭಿವೃದ್ಧಿಗೆ, ಕರ್ನಾಟಕದಲ್ಲಿ ತುಳಿತಕ್ಕೊಳಗಾದ ಜಾತಿಗಳು ಮತ್ತು ಹಿಂದುಳಿದ ವರ್ಗಗಳನ್ನು ಗುರಿಯಾಗಿಸಿಕೊಂಡು ಅವರ ಸುಧಾರಣೆಗಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತಂದರು ಎಂದು ಹೇಳಿದರು.

**ಪ್ರತಿಭಾ ಪುರಸ್ಕಾರ:** 2023–24ನೇ ಸಾಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿನ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರಧಾನ ಮಾಡಲಾಯಿತು.

ಎಸ್‌ಎಸ್‌ಎಲ್‌ಸಿಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಾದ ಎಲ್.ದ್ರಾವಿಡ್ ನಾಯ್ಕ ಪ್ರಥಮ ಸ್ಥಾನ, ಪವಿತ್ರಾ ಪಿ.ಎಸ್. ದ್ವಿತೀಯ ಸ್ಥಾನ, ಸುನಿತಾ ತೃತೀಯ ಸ್ಥಾನ ಹಾಗೂ ಪಿಯುಸಿ ವಿಭಾಗದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಾದ ಅಕ್ಷತಾ ಪ್ರಥಮ ಸ್ಥಾನ, ಆರ್.ಎಸ್.ಶಾಂತಿ ದ್ವಿತೀಯ ಸ್ಥಾನ ಹಾಗೂ ಗಂಗಮ್ಮ ತೃತೀಯ ಸ್ಥಾನ ಮತು ವಿಜ್ಞಾನ ವಿಭಾಗದಲ್ಲಿ ಸಾಧನೆ ಮಾಡಿದ ವಿರೇಶ ಅವರಿಗೆ ಪ್ರಶಸ್ತಿ ಪ್ರಧಾನ ಮಾಡಲಾಯಿತು.

ಈ ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯಿತ್‌ನ ಉಪ ಕಾರ್ಯದಶಿಗಳಾದ ಭೀಮಪ್ಪ ಲಾಳಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ರಾಮಚಂದ್ರಪ್ಪ, ಜಿಲ್ಲಾ ಕಾರ್ಮಿಕ ಅಧಿಕಾರಿ ಸೂರಪ್ಪ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು, ಸಂಘ–ಸಂಸ್ಥೆಗಳ ಮುಖಂಡರು ಮತ್ತು ಶಾಲಾ ವಿದ್ಯಾರ್ಥಿಗಳ ಉಪಸ್ಥಿತರಿದ್ದರು.

## ಮೈಕ್ರೋ ನ್ಯೂಸ್

### ತೋಟಗಾರಿಕೆ ಇಲಾಖೆ: ವಿವಿಧ ಹಣ್ಣಿನ ಸಸಿ-ಕಸಿ ಗಿಡಗಳ ಮಾರಾಟ

**ಹಂಪಿ ಟೈಮ್ಸ್ ಹೊಸಪೇಟೆ**

ತೋಟಗಾರಿಕೆ ಇಲಾಖೆಯಿಂದ ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿಗಳಲ್ಲಿ ಉತ್ತಮ ಗುಣಮಟ್ಟದ ಕಸಿ–ಸಸಿಗಳನ್ನು ಉತ್ಪಾದಿಸಿ ಕಡಿಮೆ ದರದಲ್ಲಿ ವಿತರಿಸಲಾಗುತ್ತಿದ್ದು ರೈತರು ಹಾಗೂ ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬಹುದಾಗಿದೆ. ಜಿಲ್ಲೆಯಲ್ಲಿ ಪ್ರತಿ ವರ್ಷ ಲಕ್ಷಕ್ಕೂ ಹೆಚ್ಚು ಕಸಿ–ಸಸಿಗಳನ್ನು ಉತ್ಪಾದಿಸಿ ಇಲಾಖೆಯ ನಿಗದಿತ ದರಗಳಲ್ಲಿ ಮಾರಾಟ ಮಾಡಲಾಗುತಿದ್ದು, ತೋಟಗಾರಿಕೆ ಇಲಾಖೆಯ ವಿವಿಧ ತೋಟ ಗಾರಿಕೆ ಕ್ಷೇತ್ರಗಳಿಂದ ಉತ್ತಮ ಗುಣಮಟ್ಟದ ತೆಂಗು, ಮಾವು, ಸಪೋಟ, ಪೇರಲ, ನಿಂಬೆ, ಕರಿಬೇವು, ನೇರಳೆ, ನುಗ್ಗೆ ಹಾಗೂ ವಿವಿಧ ಅಲಂಕಾರಿಕ ಸಸಿಗಳು ಮಾರಾಟಕ್ಕೆ ಲಭ್ಯವಿದ್ದು ಜಿಲ್ಲೆಯ ರೈತರು ಹಾಗೂ ಸಾರ್ವಜನಿಕರು ಖರೀದಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ತೋಟಗಾರಿಕೆ ಕ್ಷೇತ್ರದ ಅಧಿಕಾರಿಗಳ ದೂರವಾಣಿ ಸಂಖ್ಯೆಗಳಾದ, ಹೂವಿನಹಡಗಲಿ ತಾಲೂಕಿನ ನಾಗತೀಬಸಾಪುರ ತೋಟಗಾರಿಕೆ ಕ್ಷೇತ್ರ: 9686508432 ಹಾಗೂ 9148297982, ಹಗರಿಬೊಮ್ಮನಹಳ್ಳಿ ತಾಲೂಕಿನ ಮಾಲವಿ ತೋಟಗಾರಿಕೆ ಕ್ಷೇತ್ರ: 9880367794, 8495882552 ಹಾಗೂ 9900775894 ಆನಂದ ದೇವನಹಳ್ಳಿ ತೋಟಗಾರಿ ಕೆಕ್ಷೇತ್ರ: 9742968270, ಹೊಸಪೇಟೆ ತಾಲೂಕಿನ ಬುಕ್ಕಸಾಗರ ತೋಟಗಾರಿಕೆ ಕ್ಷೇತ್ರ: 9591521042, ಕೊಟ್ಟೂರು ತಾಲೂಕಿನ ಕೊಟ್ಟೂರು ತೋಟಗಾರಿಕೆ ಕ್ಷೇತ್ರ: 9663832857, ಹರಪನಹಳ್ಳಿ ತಾಲುಕಿನ ಕೆ.ಕಲ್ಲಹಳ್ಳಿ ತೋಟಗಾರಿಕೆ ಕ್ಷೇತ್ರ: 7892383890, ಕೂಡ್ಲಿಗಿ ತಾಲೂಕಿನ ಚಿಕ್ಕಜೋಗಿಹಳ್ಳಿ ತೋಟಗಾರಿಕೆ ಕ್ಷೇತ್ರ: 9483923322 ಗೆ ಸಂಪರ್ಕಿಸಿ.

# ಸೇವಾ ಪುಸ್ತಕದಲ್ಲಿ ತಿದ್ದುಪಡಿಗಳಿದ್ದರೆ ಸರಿಪಡಿಸಿಕೊಳ್ಳಿ

## ಬಿಇಒ ಎಂ.ಚನ್ನಬಸಪ್ಪ ಹೇಳಿಕೆ । ಗುರುಸ್ಪಂದನಾ ಕಾರ್ಯಕ್ರಮ

■ **ಹಂಪಿ ಟೈಮ್ಸ್ ಹೊಸಪೇಟೆ**

ಮಕ್ಕಳಲ್ಲಿ ಜ್ಞಾನ ಶಿಸ್ತು, ಮೌಲ್ಯಗಳನ್ನ ಬಿತ್ತಿ ಸತ್ಪ್ರಜೆಗಳನ್ನಾಗಿ ರೂಪಿಸುವ ಮಹತ್ತರ ಜವಾಬ್ದಾರಿಯನ್ನು ಹೊಂದಿರುವ ಶಿಕ್ಷಕರಿಗೆ ತಮ್ಮ ಸೇವಾ ಪುಸ್ತಕವನ್ನ ಪರಿಶೀಲಿಸಲು ಗುರುಸ್ಪಂದನಾ ಕಾರ್ಯಕ್ರಮ ಸಹಕಾರಿಯಾಗಲಿದೆ. ಸೇವಾ ಪುಸ್ತಕವನ್ನ ಪರಿಶೀಲಿಸಿ ಏನಾದರೂ ತಿದ್ದುಪಡಿ ಇದ್ದಲ್ಲಿ ತಕ್ಷಣ ಕಾರ್ಯ ನಿರ್ವಾಹಕರಿಂದ ದಾಖಲಿಸಿ ನಮ್ಮ ಸಹಿ ಪಡೆಯಬೇಕು ಎಂದು ಬಿಇಒ ಎಂ.ಚನ್ನಬಸಪ್ಪ ಹೇಳಿದರು.



ನಗರದ ನೌಕರರ ಭವನದಲ್ಲಿ ಹೊಸಪೇಟೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ವಿಜಯನಗರ ಜಿಲ್ಲಾ ಘಟಕದಿಂದ ಹಮ್ಮಿಕೊಂಡಿದ್ದ ಹೊಸಪೇಟೆ ತಾಲೂಕಿನ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಗುರುಸ್ಪಂದನಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಮಕ್ಕಳ ಭವಿಷ್ಯ ರೂಪಿಸುವಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಪಾತ್ರ ಬಹು ಮುಖ್ಯವಾಗಿದೆ ಎಂದರು.

>>3

# ಆ. 22ರಂದು ವಿದ್ಯುತ್ ವ್ಯತ್ಯಾಯ

■ **ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ತಾಲೂಕಿನ ಕಮಲಾಪುರದ 110/11ಕೆ.ವಿ ವಿದ್ಯುತ್ ಕೇಂದ್ರದಲ್ಲಿ ತುರ್ತು ನಿರ್ವಾಹಣಾ ಕಾಮಗಾರಿ ಇರುವುದರಿಂದ ಆಗಸ್ಟ್ 22ರಂದು ಬೆಳಗ್ಗ 9 ರಿಂದ ಸಂಜೆ 4 ಗಂಟೆಯವರೆಗೆ ಕಮಲಾಪುರ ಶಾಖಾ ವ್ಯಾಪ್ತಿಗೆ ಬರುವ ಕಮಲಾಪುರ ಪಟ್ಟಣ ಪಂಚಾಯಿತಿ ಹಾಗೂ ಬುಕ್ಕಸಾಗರ, ಸೀತಾರಾಮ ತಾಂಡ, ಮಲಪನಗುಡಿ, ಹಂಪಿ, ಪಾಪಿನಾಯಕನಹಳ್ಳಿ, ಗಾದಿಗನೂರು ಮತ್ತು ಬೈಲುವದ್ದೀಗೆರೆ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಗೆ ಬರುವ ಗ್ರಾಮಗಳಿ ಹಾಗೂ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಅಡಚಣೆ ಉಂಟಾಗಲಿದ್ದು, ರೈತರು ಹಾಗೂ ಗ್ರಾಹಕರು ಸಹಕರಿಸಬೇಕು ಎಂದು ಹೊಸಪೇಟೆ ಜೆಸ್ಕಾಂನ ಗ್ರಾಮೀಣ ಉಪ–ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಆ. 21ರಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಪ್ರವಾಸ

**ಹಂಪಿ ಟೈಮ್ಸ್ ಕೊಪ್ಪಳ**

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರಾದ ಎಂ.ಬಿ. ಪಾಟೀಲ ಅವರು ಆಗಸ್ಟ್ 21ರಂದು ಕೊಪ್ಪಳ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ.

ಸಚಿವರು ಅಂದು ಬೆಳಗ್ಗೆ 10 ಗಂಟೆಗೆ ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ಮುಖ್ಯಮಂತ್ರಿಗಳೊಂದಿಗೆ ವಿಶೇಷ ವಿಮಾನದ ಮೂಲಕ ಹೊರಟು ಬೆಳಗ್ಗೆ 10.50ಕ್ಕೆ ಕೊಪ್ಪಳದ ಗಿಣಿಗೇರಾ ಏರ್‌ಸ್ಟ್ರೀಪ್‌ಗೆ ಆಗಮಿಸುವರು. ಅಲ್ಲಿಂದ ಬೆಳಗ್ಗೆ 11ಕ್ಕೆ ನಿರ್ಗಮಿಸಿ ರಸ್ತೆಯ ಮೂಲಕ ಕುಷ್ಟಗಿ, ಇಳಕಲ್ ಮಾರ್ಗವಾಗಿ ಮಧ್ಯಾಹ್ನ 12.30ಕ್ಕೆ ವಿಜಯಪುರ ಜಿಲ್ಲೆಯ ನಿಡಗುಂದಿ ತಾಲ್ಲೂಕಿನ ಆಲಮಟ್ಟಿಯ ಲಾಲ್ ಬಹದ್ದೂರ್ ಶಾಸ್ತ್ರಿ ಜಲಾಶಯಕ್ಕೆ ಬಾಗಿನ ಅರ್ಪಣೆ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಮಧ್ಯಾಹ್ನ 3 ಗಂಟೆಗೆ ಆಲಮಟ್ಟಿಯಿಂದ ನಿರ್ಗಮಿಸಿ 04.30ಕ್ಕೆ ಗಿಣಿಗೇರಾ ಏರ್‌ಸ್ಟ್ರೀಪ್‌ಗೆ ಆಗಮಿಸಿ, ಅಲ್ಲಿಂದ 04.40ಕ್ಕೆ ಮುಖ್ಯಮಂತ್ರಿಗಳೊಂದಿಗೆ ವಿಶೇಷ ವಿಮಾನದ ಮೂಲಕ ಬೆಂಗಳೂರಿಗೆ ಪ್ರಯಾಣ ಬೆಳೆಸುವರು ಎಂದು ಸಚಿವರ ವಿಶೇಷ ಕರ್ತವ್ಯಾಧಿಕಾರಿಗಳು ತಿಳಿಸಿದ್ದಾರೆ.

# ಮಾನವತೆಯ ರಾಯಭಾರಿ ನಾರಾಯಣ ಗುರುಜೀ

## ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಹೇಳಿಕೆ। ನಾರಾಯಣ ಜಯಂತಿ, ಅರಸು ದಿನಾಚರಣೆ



■ **ಹಂಪಿ ಟೈಮ್ಸ್ ಕೂಡ್ಲಿಗಿ**

ಒಂದೇ ಜಾತಿ, ಒಂದೇ ಧರ್ಮ, ಒಬ್ಬರೇ ದೇವರು ಎನ್ನುವ ವಿಶ್ವ ಪ್ರಜ್ಞೆಯನ್ನು ಜಾಗೃತಗೊಳಿಸಿ ಮಾನವತೆಯ ರಾಯಭಾರಿಯಾದರು ಬ್ರಹ್ಮರ್ಷಿ ನಾರಯಣ ಗುರುಜೀ ಎಂದು ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಹೇಳಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ತಾಲೂಕು ಆಡಳಿತದ ವತಿಯಿಂದ ಏರ್ಪಡಿಸಿದ್ದ ಬ್ರಹ್ಮರ್ಷಿ ನಾರಯಣ ಜಯಂತಿ, ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಜಯಂತಿ ಮತ್ತು ರಾಷ್ಟ್ರೀಯ ಸದ್ಭಾವನಾ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗಿಯಾಗಿ ಮಾತನಾಡಿದರು.

ಜ್ಞಾನ ವಿಕಾಸದಿಂದ ಅನಿಷ್ಟಗಳ ನಿವಾರಣೆ ಹಾಗೂ ಸಾಮಾಜಿಕ ನ್ಯಾಯ ಸಾಧ್ಯವೆಂದು, ಅದಕ್ಕೆ ಶಿಕ್ಷಣವೊಂದನ್ನೇ ಸಾಧನವಾಗಿಸಿ ವಿದ್ಯೆಯಿಂದ ಸ್ವತಂತ್ರರಾಗಬಹುದು ಎನ್ನುವುದನ್ನು ಅಕ್ಷರಶಃ ಸಾಧಿಸಿದ್ದಾರೆ. ಜಾತೀಯ ಕಾರಣಕ್ಕೆ ಅಸಮಾನತೆಯನ್ನು ಎದುರಿಸಿ ದೇವಾಲಯಗಳ ಪ್ರವೇಶವನ್ನು ನಿರಾಕರಿಸಿದಾಗ ಅಂಥವರೇ ಪೂಜಿಸುವ ಮತ್ತು ಎಲ್ಲರಿಗೂ ಮುಕ್ತ ಪ್ರವೇಶಿಸುವ ದೇಗುಲಗಳನ್ನು ಸ್ಥಾಪಿಸಿ ರುವುದನ್ನು ಗಮನಿಸಿದಾಗ ಅವರ ದೂರದರ್ಶಿತ್ವ ಮತ್ತು ಸಂಯಮದ ಕಾರ್ಯತಂತ್ರ ಅರಿವಾಗುತ್ತದೆ ಎಂದರು.

ಬ್ರಹ್ಮರ್ಷಿ ನಾರಾಯಣ ಗುರುಗಳನ್ನು ಒಂದು ಜಾತೀಗೆ ಸೀಮೀತ ಮಾಡದೇ, ಅವರ ತತ್ವಾದರ್ಶಗಳನ್ನು ಎಲರೂ ಅನುಸರಿಸುವ ಮೂಲಕ ಸಮ ಸಮಾಜ ನಿರ್ಮಾಣಕ್ಕೆ ಮುಂದಾಗೋಣ ಎಂದು ತಿಳಿಸಿದರು.

ಇದೇ ಸಂಧರ್ಭದಲ್ಲಿ ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರ ಸ್ಮರಣೆ ಮಾಡಿ ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಸಾಮಾಜಿಕ ನ್ಯಾಯ ದೊರಕಿಸಿ ಕೊಟ್ಟ ಧೀಮಂತ ರಾಜಕಾರಣಿ ಎಂದು ಸ್ಮರಿಸಿದರು. ನಂತರ ದಿ.ಮಾಜಿ ಪ್ರಧಾನಿ ರಾಜೀವ್ ಗಾಂಧಿ ಜಯಂತಿ ಅಂಗವಾಗಿ ಸದ್ಭಾವನಾ ದಿವಸ್ ಆಚರಣೆಗೆ ಪ್ರತಿಜ್ಞಾ ವಿಧಿಯನ್ನು ಭೋದಿಸಿದರು. ನಂತರ ಉಪನ್ಯಾಸಕ ವಿವೇಕಾನಂದ ಬ್ರಹ್ಮರ್ಷಿ ನಾರಯಣ ಗುರುಜೀ ಕುರಿತು ಉಪನ್ಯಾಸ ನೀಡಿದರು. ಆರ್ಯ ಈಡಿಗ ಸಂಘದಿಂದ ಪಟ್ಟಣದಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ ನಿವೇಶನ ನೀಡಲು ಮನವಿ ಸಲ್ಲಿಸಿದರು.

ತಹಸೀಲ್ದಾರ್ ಎಂ.ರೇಣುಕಾ, ಗ್ರೇಡ್ 2 ತಹಸೀಲ್ದಾರ್ ನೇತ್ರಾವತಿ, ಶಿರಸ್ತೆದಾರ ಎಸ್. ಚಂದ್ರಶೇಖರ, ಆರ್ಯ ಈಡಿಗ ಸಮಾಜದ ತಾಲೂಕು ಅಧ್ಯಕ್ಷ ಮಂಜುನಾಥ, ಉಪಾಧ್ಯಕ್ಷ ಈ.ವೆಂಕಟೇಶ್, ಸಂಘಟನಾ ಕಾರ್ಯದರ್ಶಿ ಈ.ಸಂತೋಷ, ಗ್ರಾಪಂ ಸದಸ್ಯರಾದ ಶಿಲ್ಪ, ಶ್ರೀನಿವಾಸ್, ಮುಖಂಡರಾದ ತಿಪ್ಪೇಸ್ವಾಮಿ, ಸುರೇಶ್ ಬಾಬು, ನಾಗರಾಜ ಬಾಬು, ಬಾಬಣ್ಣ, ಶ್ರೀನಿವಾಸ್, ಈ.ಮಲ್ಲಿಕಾರ್ಜುನಪ್ಪ, ಹೇಮೇಶ್ ಗೌಡ, ಶ್ರೀನಿವಾಸ್, ಮಂಜು ನಾಥ, ಈಚಲಬೊಮ್ಮನಹಳ್ಳಿ ಮಂಜು, ರವಿ ಅನೇಕರು ಇದ್ದರು.

# ಸರ್ಕಾರದ ಸೌಲಭ್ಯ ಪಡೆದು ಮಕ್ಕಳಿಗೆ ಉನ್ನತ ಶಿಕ್ಷಣ ನೀಡಿ

## ತಾಲೂಕು ಅಧ್ಯಕ್ಷ ಜಾಣ ಅನಿಲ್‌ಕುಮಾರ್ ಕರೆ



■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಸರ್ಕಾರದ ಸೌಲಭ್ಯಗಳು ಸಾಕಷ್ಟು ಇವೆ, ಅವುಗಳನ್ನು ಬಳಸಿಕೊಳ್ಳುವ ಮೂಲಕ ನಿಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ನೀಡಿ, ಉನ್ನತ ಪದವಿಗಳನ್ನು ಅಲಂಕರಿಸಲು ಸಹಕರಿಸಿ ಎಂದು ಪದ್ಮಶಾಲಿ ಸಮುದಾಯದ ತಾಲೂಕು ಅಧ್ಯಕ್ಷ ಜಾಣ ಅನಿಲ್ ಕುಮಾರ್ ಕರೆ ನೀಡಿದರು.

ಪಟ್ಟಣದ ನೀಲಕಂಠೇಶ್ವರ ದೇವಸ್ಥಾನದಲ್ಲಿ ಸಮುದಯದಿಂದ ನೂಲ ಹುಣ್ಣಿಮೆ ಆಚರಣೆಯ ಹಿನ್ನೆಲೆಯಲ್ಲಿ, ಜನಿವಾರ ಧಾರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಇಂದಿನ ದಿನದಲ್ಲಿ ಮಕ್ಕಳಿಗೆ ಶಿಕ್ಷಣ ಕೊಡಿಸುವುದು ಕಷ್ಟವಾಗಲ್ಲ. ಆದರೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವ ಮೂಲಕ ಉತ್ತಮ ಮತ್ತು ಉನ್ನತ ಶಿಕ್ಷಣವನ್ನು ಪಡೆಯಬೇಕು ಅಷ್ಟೇ ಎಂದರು. ನಮ್ಮ ಸಮುದಾಯ ಸಂಪೂರ್ಣ ಹಿಂದುಳಿದ ಸಮಾಜವಾಗಿದ್ದರೂ, ಎಲ್ಲಾ ಕ್ಷೇತ್ರಗಳಲ್ಲೂ ಸಾಧಕರಿದ್ದಾರೆ. ಸಾಧಕರನ್ನು ಗುರುತಿಸುವಂತ ಕೆಲಸ ಸರ್ಕಾರದಾಗಬೇಕು. ಆದರೂ ನಮ್ಮ ಸಮುದಾಯವನ್ನು ಸರ್ಕಾರ ನಿರ್ಲಕ್ಷ್ಯ ವಹಿಸಿದೆ ಎಂದರು.

ತಾಲೂಕು ಅಧ್ಯಕ್ಷ ವೀರಣ್ಣ, ಉಪಾಧ್ಯಕ್ಷ ಜೆ.ನಾಗರಾಜ, ಪ್ರಧಾನ ಕಾರ್ಯದರ್ಶಿ ಜಾಣ ಸೋಮಶೇಖರ, ಕಾರ್ಯದರ್ಶಿ ಪಿ.ಹನುಮೇಶ್, ಕಾರ್ಯಕಾರಿಣಿ ಸಮಿತಿ ಅಧ್ಯಕ್ಷ ಮಿಲ್ಟ್ರಿಶಿವಾನಂದ, ಲಕ್ಷ್ಮಣ, ವೆಂಕಟೇಶ, ಚಂದ್ರಶೇಖರ, ಗಣೇಶ, ಚಿಂತ್ರಪಳ್ಳಿ ಸುರೇಶ್, ಡಾ.ಬಸವರಾಜ, ವೀರೇಶ್, ಅನಂತ್, ಹನಸಿ ವೆಂಕಟೇಶ್, ಮಂಜುನಾಥ, ನಾರಾಯಣಪ್ಪ, ಜಾಣ ನಾಗರಾಜ, ಅಂಜಿನಪ್ಪ ಕೊಟ್ರೇಶ್, ಕಡ್ಲೆಪ್ಪ, ರಮೇಶ್, ಗೋವಿಂದ, ಪಾಲಾಕ್ಷಪ್ಪ, ಹನುಮಂತಪ್ಪ, ಶ್ರೀನಿವಾಸ, ಕರಿಯಪ್ಪ, ಮಹೇಶ್ ಮತ್ತಿತರರಿದ್ದರು.

## ವಿಜ್ಞಾನ

# ಬೇರುಗಳು ಏಕೆ ನಿರ್ದಿಷ್ಟ ಬಣ್ಣ ಹೊಂದಿಲ್ಲ?

■ ಆರ್.ಬಿ.ಗುರುಬಸವರಾಜ

ಭಾನುವಾರ ಶಾಲೆಗೆ ರಜೆ ಇರುವುದರಿಂದ ಭವಾನಿ ತಾಯಿಯ ಜೊತೆಗೆ ತೋಟಕ್ಕೆ ಹೋದಳು. ತಾಯಿ ಬೆಳೆಗಳಲ್ಲಿನ ಕಳೆಗಳನ್ನು ಕೀಳುತ್ತಿದ್ದಳು. ತಾಯಿ ಮಾಡುತ್ತಿದ್ದ ಕೆಲಸವನ್ನು ಸ್ವಲ್ಪ ಹೊತ್ತು ಗಮನಿಸಿದ ಭವಾನಿ ತಾನೂ ಕಳೆ ಕೀಳಲು ಮುಂದಾದಳು. ಬೆಳೆ ಯಾವುದು? ಕಳೆ ಯಾವುದು? ಎಂದು ಗೊತ್ತಾಗದೇ ಕೆಲ ಬೆಳೆ ಸಸ್ಯಗಳನ್ನೂ ಕಿತ್ತುಹಾಕಿದಳು. ಬೆಳೆ ಕಿತ್ತು ಹಾಕಿರುವುದನ್ನು ನೋಡಿದ ತಾಯಿ ಗದರಿಸಿದಳು. ಅಷ್ಟೊತ್ತಿಗೆ ತಂದೆಯೂ ಅಲ್ಲಿಗೆ ಬಂದರು. ಮಗಳನ್ನು ಬೈದದ್ದಕ್ಕೆ ಅವರಿಗೆ ಬೇಸರವಾಯ್ತು. ಮಗಳಿಗೆ ಸ್ವಲ್ಪ ಸಮಾದಾನ ಹೇಳಿದರು. ತಂದೆ ತನ್ನ ಪರವಾಗಿ ನಿಂತಿದ್ದಕ್ಕೆ ಭವಾನಿಗೆ ಧೈರ್ಯ ಬಂದಿತ್ತು. ತನ್ನ ಮನದಲ್ಲಿದ್ದ



ಪ್ರಶ್ನೆಗೆ ಪರಿಹಾರ ಕಂಡುಕೊಳ್ಳಲು ಮುಂದಾದಳು. "ಯಪ್ಪಾ, ಬೆಳೆ ಮತ್ತು ಕಳೆ ಸಸ್ಯಗಳು ಬೇರೆ ಬೇರೆ ಆದರೂ ಎಲ್ಲಾ ಸಸ್ಯಗಳ ಬೇರಿನ ಬಣ್ಣ ಒಂದೇ ರೀತಿ ಇದೆ. ಬೇರುಗಳಿಗೆ ಏಕೆ ನಿರ್ದಿಷ್ಟ ಬಣ್ಣ ಇಲ್ಲ?" ಎಂದಳು. ಮಗಳ ಪ್ರಶ್ನೆಯನ್ನು ಮೆಚ್ಚಿಕೊಂಡ ತಂದೆ ಬೇರಿನ ಬಣ್ಣದ ಬಗ್ಗೆ ತಿಳಿಸಿದರು.

ಸಸ್ಯಗಳ ಬೇರುಗಳು ನಿರ್ದಿಷ್ಟ ಬಣ್ಣವನ್ನು ಹೊಂದಿಲ್ಲ. ಏಕೆಂದರೆ ಅವುಗಳು ಎಲೆ, ಹೂವು ಮತ್ತು ಹಣ್ಣುಗಳಂತೆ ವರ್ಣರಂಜಿತ ಕಾಣಲು ವಿಶೇಷ ವರ್ಣದ್ರವ್ಯಗಳನ್ನು ಹೊಂದಿಲ್ಲ. ಆದ್ದರಿಂದ ಬೇರುಗಳಿಗೆ ನಿರ್ದಿಷ್ಟ ಬಣ್ಣವಿಲ್ಲ. ಎಲೆಗಳು ಕ್ಲೋರೊಫಿಲ್ ಎಂಬ ವರ್ಣದ್ರವ್ಯ ಹೊಂದಿರುವುದರಿಂದ ಹಸಿರು ಬಣ್ಣವನ್ನು ಹೊಂದಿವೆ. ಹೂವುಗಳು ಕ್ಯಾರೊಟಿನಾಯ್ಡ್‌ಗಳು ಮತ್ತು ಆಂಥೋಸಯಾನಿನ್‌ಗಳಂತಹ ವಿವಿಧ ವರ್ಣದ್ರವ್ಯಗಳನ್ನು ಹೊಂದಿರುವುದರಿಂದ ಗಾಢವಾದ ಬಣ್ಣವನ್ನು ಹೊಂದಿವೆ. ಅದೇ ರೀತಿ ಹಣ್ಣುಗಳು ಕ್ಯಾರೊಟಿನಾಯ್ಡ್‌ಗಳು ಮತ್ತು ಫ್ಲೇವನಾಯ್ಡ್‌ಗಳಂತಹ ವರ್ಣದ್ರವ್ಯಗಳನ್ನು ಹೊಂದಿದ್ದು ಅವುಗಳಿಗೆ ವಿಶಿಷ್ಟವಾದ ಬಣ್ಣಗಳನ್ನು ನೀಡುತ್ತವೆ. ಅದರಂತೆ ಬೇರುಗಳು ಯಾವುದೇ ವರ್ಣದ್ರವ್ಯ ಹೊಂದಿಲ್ಲದಿರುವುದರಿಂದ ನಿರ್ದಿಷ್ಟ ಬಣ್ಣವಿಲ್ಲ.

ಬೇರುಗಳು ಯಾವುದೇ ಬಣ್ಣವನ್ನು ಹೊಂದಿರದಿದ್ದರೂ ಹ್ಯೂಮಿಕ್ ಆಮ್ಲ, ಟ್ಯಾನಿನ್‌ಗಳು ಅಥವಾ ಕ್ಯಾರೊಟಿನಾಯ್ಡ್‌ಗಳಂತಹ ಪದಾರ್ಥಗಳ ಉಪಸ್ಥಿತಿಯಿಂದಾಗಿ ಅವು ಕಂದು, ಕಪ್ಪು ಅಥವಾ ಹಳದಿಯಾಗಿ ಕಾಣಿಸಬಹುದು. ಇದು ಮೂಲ ಅಂಗಾಂಶಗಳಲ್ಲಿ ಸಂಗ್ರಹವಾಗಬಹುದು ಅಥವಾ ಬೇರುಗಳ ಮೇಲ್ಮೈಗೆ ಅಂಟಿಕೊಳ್ಳಬಹುದು. ಈ ಬಣ್ಣಗಳು ಬೇರುಗಳಿಂದ ಉತ್ಪತ್ತಿಯಾಗುವುದಿಲ್ಲ. ಆದರೆ ಸುತ್ತಮುತ್ತಲಿನ ಮಣ್ಣಿನಿಂದ ಸಾವಯವ ಅಥವಾ ಅಜೈವಿಕ ಸಂಯುಕ್ತಗಳ ಶೇಖರಣೆಯ ಪರಿಣಾಮವಾಗಿ ಬೇರುಗಳು ಬಣ್ಣ ಪಡೆಯುತ್ತವೆ.

### ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ದಾರ್ಶನಿಕ, ಕವಿ ಖಲೀಲ್ ಗಿಬ್ರಾನ್

ಸರಿಯಾಗಿ ಇಂಗ್ಲಿಷ್ ಮಾತನಾಡಲು ಬಾರದ, ಕಪ್ಪು ವರ್ಣದ ಆ ವ್ಯಕ್ತಿ ಆ ದೇಶಕ್ಕೆ ತನ್ನ ತಾಯಿ ಮತ್ತು ಸಹೋದರ ಸಹೋದರಿಯರೊಂದಿಗೆ ವಲಸೆ ಬಂದಾಗ ಆತನನ್ನು ಕೊಳಕ ಎಂದೇ ಕರೆದರು. ವಲಸೆ ಬಂದ ಮಕ್ಕಳಿಗಾಗಿಯೇ ಇರುವ ತರಗತಿಯಲ್ಲಿ ಆತನಿಗೆ ಕಲಿಸಲಾಗುತ್ತಿತ್ತು.ಆದರೆ ಕೆಲವೇ ಸಮಯದಲ್ಲಿ ಆತನ ಭಾವಗಳನ್ನು ಅರಿಯುವಲ್ಲಿ ಆತನ ಶಿಕ್ಷಕರು ಯಶಸ್ವಿಯಾದರು. ಚೆನ್ನಾಗಿ ಚಿತ್ರ ಬಿಡಿಸುವ, ಆ ಚಿತ್ರಗಳ ಮೂಲಕ ತನ್ನ ಮನದ ಭಾವಗಳನ್ನು ಹೊರ ಹಾಕುವ ಆತ ಮುಂದೆ ಕೆಲವೇ ದಿನಗಳಲ್ಲಿ ಇಂಗ್ಲಿಷ್ ಭಾಷೆಯ ಪ್ರಭುತ್ವವನ್ನು ಹೊಂದಿದನು.

ತನ್ನ ಮಕ್ಕಳ ಒಳ್ಳೆಯ ಭವಿಷ್ಯಕ್ಕಾಗಿ ತಾನಿರುವ ಸಿರಿಯ ಮತ್ತು ಲಿಬಿಯಾ ದೇಶದಿಂದ ಅಮೆರಿಕದ ದಕ್ಷಿಣ ಭಾಗದಲ್ಲಿರುವ ಬೋಸ್ಟನ್ ಎಂಬ ಪಟ್ಟಣಕ್ಕೆ ಬಂದು ನೆಲೆಸುವ ದೃಢ ನಿರ್ಧಾರ ಆತನ ತಾಯಿಯದು. ಆ ಸ್ಥಳ ಈಗಾಗಲೇ 2ನೇ ಅತಿ ದೊಡ್ಡ ಸಿರಿಯನ್ ಲಿಬಿಯನ್ ಅಮೆರಿಕನ್ ವಸಾಹತು ಸಮೂಹವಾಗಿ ಗುರುತಿಸಲ್ಪಟ್ಟಿತ್ತು. ಆತನ ತಾಯಿ ಕ್ಯಾನ್ಸರ್‌ನಿಂದ ಬಳಲುತ್ತಿದ್ದರೆ, ಓರ್ವ ಸಹೋದರ ಮತ್ತು ಸಹೋದರಿ ಕ್ಷಯ ರೋಗದಿಂದ ಒದ್ದಾಡುತ್ತಿದ್ದರು.

ನೋವು, ನಿರಾಶೆಯ ಕೂಪದಿಂದಲೇ ಅತಿ ಬಲಿಷ್ಠವಾದಂತ ಜೀವಗಳು ಉದ್ಭವಿಸುತ್ತವೆ, ಅತ್ಯಂತ ದೊಡ್ಡ ಪಾತ್ರಗಳು ಗಾಯದ ಕಲೆಗಳಿಂದ ಒಡಮೂಡುತ್ತವೆ ಎಂದು ಆತ ಬರೆದಿರುವುದು ಇದೇ ಕಾರಣಕ್ಕೆ ಇರಬಹುದು. ಪ್ರಸ್ತುತ ಲೆಬನಾನ್ ಎಂದು ಗುರುತಿಸಲ್ಪಡುವ ದೇಶದಲ್ಲಿ ಅತ್ಯಂತ ಬಡ ಕುಟುಂಬದಲ್ಲಿ 1883 ಜನವರಿ 6 ರಂದು ಆತ ಹುಟ್ಟಿದನು. ಆತನ ಕುಟುಂಬದಲ್ಲಿ ಆತನೊಬ್ಬನೇ ಹೆಚ್ಚಿನ ವಿದ್ಯಾಭ್ಯಾಸ ಮಾಡಲು ಸಾಧ್ಯವಾಯಿತು. ಕುಟುಂಬದಲ್ಲಿ ತಾಂಡವವಾಡುತ್ತಿದ್ದ ಬಡತನದಿಂದಾಗಿ ಆತನ ಇಬ್ಬರು ಸಹೋದರಿಯರು ಶಿಕ್ಷಣದಿಂದ ವಂಚಿತರಾಗಿದ್ದರು. ಜೊತೆಗೆ ಮಧ್ಯ ಪೂರ್ವ ರಾಷ್ಟ್ರಗಳಲ್ಲಿನ ಸಂಪ್ರದಾಯಗಳು ಹೆಣ್ಣು ಮಕ್ಕಳಿಗೆ ಶಾಲೆಯಲ್ಲಿ ಕಲಿಯಲು ಅನುಕೂಲಕರವಾಗಿರಲಿಲ್ಲ.

ಅತ್ಯಂತ ಬಡತನ ಸಂಕಟ ನೋವುಗಳ ನಡುವೆ ಬೆಳೆದಿದ್ದ ಖಲೀಲ್ ಗಿಬ್ರಾನ್ ಗೆ ಹೆಣ್ಣು ಮಕ್ಕಳ ತಾಕತ್ತಿನ ಅರಿವಿತ್ತು. ಆತನ ಓರ್ವ ಸಹೋದರಿ, ಸಹೋದರ ಮತ್ತು ತಾಯಿಯ ಮರಣಾನಂತರ ಹಿರಿಯ ಸಹೋದರಿ ಮರಿಯಾನ ಅಂಗಡಿಯೊಂದರಲ್ಲಿ ಬಟ್ಟೆ ಹೊಲಿಯುವ ಕೆಲಸ ಮಾಡಿ ಕುಟುಂಬ ನಿರ್ವಹಣೆ ಮಾಡಿದಳು. ಆಕೆಯೇ ಗಿಬ್ರಾನ್ ಗೆ ಆಸರೆಯಾಗಿ ನಿಂತಳು.

ಪ್ರೀತಿ, ಶಾಂತಿ ಮತ್ತು ತಿಳುವಳಿಕೆಯ ಮೇಲೆ ಆತನ ನಂಬಿಕೆ ಅಪಾರ... ತಮ್ಮೆಲ್ಲ ಕವನಗಳ ಮೂಲಕ ಮಾನವ ಜನಾಂಗದಲ್ಲಿನ ಮಾನವೀಯ ಮೌಲ್ಯಗಳನ್ನು ವಿವರಿಸಿದಾತನೇ ಖಲೀಲ್ ಗಿಬ್ರಾನ್.




ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಆತನ ಮೊತ್ತ ಮೊದಲ ಕೃತಿ ದ ಪ್ರೊಫೆಟ್ 1923ರಲ್ಲಿ ಪ್ರಕಟವಾಗಿ ಅದರ 10 ಮಿಲಿಯ ಪ್ರತಿಗಳು ಮಾರಾಟವಾದವು. ಶೇಕ್ಸಪಿಯರ್ ಮತ್ತು ಲಿಯೋಜಿಯ ನಂತರ ವಿಶ್ವದ ಮೂರನೇ ಅತಿ ದೊಡ್ಡ ಲೇಖಕನಾಗಿ ಹೊರ ಹೊಮ್ಮಿದ ಆತನ ಕೃತಿಗಳಿಗೆ ಅತ್ಯಂತ ಬೇಡಿಕೆ ಇತ್ತು. ವಿಶ್ವದಾದ್ಯಂತ ಒಟ್ಟು 108 ಭಾಷೆಗಳಲ್ಲಿ ಅನುವಾದಿಸಲ್ಪಟ್ಟು ಪ್ರಕಟವಾದ ಆತನ ಕೃತಿ 'ದ ಪ್ರೊಫೆಟ್ 'ನ ಸಾಲುಗಳನ್ನು ಮದುವೆಯ ಆಮಂತ್ರಣ ಪತ್ರಿಕೆಗಳಲ್ಲಿ, ರಾಜಕೀಯ ಭಾಷಣಗಳಲ್ಲಿ, ಅಂತ್ಯಸಂಸ್ಕಾರಗಳಲ್ಲಿ ಉಚ್ಚರಿಸಲಾಗುತ್ತಿತ್ತು.

ಅಮೆರಿಕದ ಪ್ರೆಸಿಡೆಂಟ್ ಆಗಿದ್ದ ಜಾನ್ ಎಫ್ ಕೆನಡಿ, ಭಾರತದ ಪ್ರಧಾನಿಯಾಗಿದ್ದ ಇಂದಿರಾ ಗಾಂಧಿ, ಎಲ್ವಿಸ ಪ್ರೆಸ್ಲಿ, ಜಾನ್ ಲೆನಿನ್ ಮತ್ತು ಡೇವಿಡ್ ಭೋವಿಯಂತಹ ಮಹಾನ್ ವ್ಯಕ್ತಿಗಳು ಆತನ ಕೃತಿಯ ಸಾಲುಗಳನ್ನು ತಮ್ಮ ಭಾಷಣಗಳಲ್ಲಿ ಬಳಸುತ್ತಿದ್ದರು.

ಸಮಾಜದ ಜನರ ಮೌಢ್ಯ, ಬೂಟಾಟಿಕೆ ಮತ್ತು ಲಂಚಗುಳಿತನವನ್ನು



ಆತ ಬಹಿರಂಗವಾಗಿ ಖಂಡಿಸುತ್ತಿದ್ದನು. ಆತನ ಚಾಟಿ ಏಟಿನಂತಹ ಮಾತುಗಳು ಸುಳ್ಳಿನ ಮುಖವಾಡವನ್ನು ಕಳಚುತ್ತಿದ್ದವು. ಇದರಿಂದ ಆತನ ವಿರೋಧಿಗಳು ಆತನಿಗೆ ಜೀವ ಬೆದರಿಕೆಯನ್ನು ಒಡ್ಡಿದ್ದರು ಮತ್ತು ಆತನ ಕೃತಿಗಳು ಬೇರಟ್ ಮತ್ತು ಅಮೆರಿಕಗಳಲ್ಲಿ ದಹಿಸಲ್ಪಟ್ಟವು.

ತನ್ನ ತಾಯಿಯ ಕುರಿತಾಗಿ ಖಲೀಲ್ ಹೀಗೆ ಬರೆದಿದ್ದಾನೆ "ಮಾನವ ಸಮುದಾಯದ ತುಟಿಯ ಮೇಲೆ ಮೂಡುವ ಅತ್ಯಂತ ಸುಂದರವಾದ ಶಬ್ದ ತಾಯಿ ಮತ್ತು ಅತ್ಯಂತ ಸುಂದರವಾದದ್ದು ಅಮ್ಮ ಎಂಬ ಕರುಳಿನ ಕರೆ. ಅತ್ಯಂತ ಸಿಹಿಯಾದ ಮತ್ತು ಕರುಣೆಯಿಂದ ಕೂಡಿದ ಈ ಕರೆ ಹೃದಯದ ಆಳದಿಂದ ಬರುತ್ತದೆ. ಅಮ್ಮ ಎಂಬ ಪದದಲ್ಲಿ ಭರವಸೆ ಮತ್ತು ಪ್ರೀತಿಗಳು ತುಂಬಿವೆ". ತಾಯಿಯೇ ನಮಗೆ ಎಲ್ಲವೂ.... ನಮ್ಮ ನೋವಿನಲ್ಲಿ ಸಮಾಧಾನವಾಗಿ, ನಿರಾಶೆಯಲ್ಲಿ ಭರವಸೆಯಾಗಿ, ದೌರ್ಬಲ್ಯದಲ್ಲಿ ಬಲವಾಗಿ ನಿಲ್ಲುವಾಕೆ ತಾಯಿ. ಪ್ರೀತಿ, ಮಮತೆ, ಕರುಣೆ, ಸಹಾನುಭೂತಿ ಮತ್ತು ಕ್ಷಮೆಯ ಮೂರ್ತಿ ತಾಯಿ ಎಂದು ಗಿಬ್ರಾನ್ ಬಣ್ಣಿಸಿದ್ದಾನೆ.

ಹೆಣ್ಣು ಮಕ್ಕಳ ಸ್ವಾತಂತ್ರ್ಯ ಮತ್ತು ಶಿಕ್ಷಣಕ್ಕಾಗಿ ಧ್ವನಿ ಎತ್ತಿದ ಗಿಬ್ರಾನ್ ಅದರಲ್ಲಿ ಭಾಗಶಹ ಯಶಸ್ವಿಯಾದನು.ಅನ್ಯರ ಹಕ್ಕುಗಳನ್ನು ರಕ್ಷಿಸುವುದು ಮಾನವ ಸಮುದಾಯದ ಅತ್ಯಂತ ಮಹತ್ವದ ಮತ್ತು ಸುಂದರವಾದ ಕಾರ್ಯ ಎಂಬುದು ಆತನ ನಂಬಿಕೆಯಾಗಿತ್ತು

ಹೊಸದಾಗಿ ವಲಸೆ ಬರುತ್ತಿದ್ದ ಜನರಿಗೆ ತನ್ನ ಒಂದು ಕವನದಲ್ಲಿ ಆತ ಹೀಗೆ ಬರೆದಿದ್ದಾನೆ ಅಮೆರಿಕ ಎಂಬ ಬೃಹತ್ ರಾಷ್ಟ್ರಕ್ಕೆ ನೀವೆಲ್ಲರೂ ಹೀಗೆ ಹೇಳುವಿರೆಂದು ನಂಬಿದ್ದೇನೆ... ಇಲ್ಲಿದ್ದೇನೆ ನಾನು, ಓರ್ವ ಯುವಕನಾಗಿ ಒಂದು ಪುಟ್ಟ ಮರವಾಗಿ ನಾನು ಇಲ್ಲಿದ್ದೇನೆ,ನನ್ನ ಬೇರುಗಳನ್ನು ದೂರದ ಲೆಬನಾನಿನ ಗುಡ್ಡಗಳಿಂದ ಕಿತ್ತು ತಂದು ಇಲ್ಲಿ ಊರಿದ್ದೇನೆ. ಹೌದು ಬಲವಾಗಿ ಇಲ್ಲಿ ಊರಲ್ಪಟ್ಟಿದ್ದೇನೆ ಮತ್ತು ನಾನು ಫಲ ಭರಿತವಾಗುತ್ತೇನೆ ಎಂದು ಹೇಳಿದ್ದಾನೆ.

ತನ್ನ ಕೃತಿ 'ದಿ ಪ್ರೊಫೆಟ್ನ'ಲ್ಲಿ ಆತ ಹೀಗೆ ಬರೆದಿದ್ದಾನೆ ನಿಮ್ಮ ಸಾಂಗತ್ಯದಲ್ಲಿಯೂ ತುಸು ಅಂತರವಿರಲಿ, ಸ್ವರ್ಗದ ಗಾಳಿಯು ಆ ಅಂತರದಲ್ಲಿ ನೃತ್ಯ ಮಾಡುತ್ತಿರಲಿ. ಒಬ್ಬರನ್ನೊಬ್ಬರು ಪ್ರೀತಿಸಿ ಆದರೆ ಪ್ರೀತಿಯು ಬಂಧನವಾಗದಿರಲಿ, ಎರಡು ದಡಗಳ ನಡುವೆ ಹರಿಯುವ ನದಿಯಂತೆ ನಿಮ್ಮಿಬ್ಬರ ಆತ್ಮಗಳ ಸಾಂಗತ್ಯವಿರಲಿ, ನಿಮ್ಮಿಬ್ಬರ ಪ್ರೀತಿಯ ಬಟ್ಟಲನ್ನು ಪರಸ್ಪರ ತುಂಬಿಕೊಳ್ಳಿ. ಆದರೆ ಒಂದೇ ಬಟ್ಟಲಿನಿಂದ ಆಸ್ವಾದಿಸಬೇಡಿ. ಒಬ್ಬರು ಮತ್ತೊಬ್ಬರಿಗೆ ನಿಮ್ಮ ರೊಟ್ಟಿಯನ್ನು ಕೊಟ್ಟುಕೊಳ್ಳಿ... ಆದರೆ ಒಂದೇ ರೊಟ್ಟಿಯನ್ನು ಇಬ್ಬರೂ ಹಂಚಿ ತಿನ್ನಬೇಡಿ. ಹಾಡು ಮತ್ತು ಕುಣಿತಗಳಲ್ಲಿ ನಿಮ್ಮನ್ನು ನೀವು ಜೊತೆಯಾಗಿ ತೊಡಗಿಸಿಕೊಂಡು ಸಂತಸಪಡಿ, ಆದರೆ ಅದರ ಜೊತೆಗೆ ಒಂಟಿಯಾಗಿಯೂ ಇರಿ. ಯಾವ ರೀತಿ ತಂತಿ ವಾದ್ಯದ ತಂತಿಗಳು ಜೊತೆಯಾಗಿದ್ದೂ ಬೇರೆಯಾಗಿರುತ್ತವೆ ಮತ್ತು ಮೀಟಿದಾಗ ಒಂದೇ ನಾದವನ್ನು ಹೊರಡಿಸುತ್ತವೆಯೋ ಹಾಗೆ ನೀವು ಇರಿ. ನಿಮ್ಮ ಹೃದಯವನ್ನು ಪರಸ್ಪರ ಕೊಟ್ಟುಕೊಳ್ಳಿ ಆದರೆ ನಿಮ್ಮ ಜೀವನ ನಿಮ್ಮ ಕೈಯಲ್ಲಿರಲಿ. ಒಬ್ಬರಿಗೊಬ್ಬರು ಜೊತೆಯಾಗಿ ನಿಲ್ಲಿರಿ ಆದರೆ ಹತ್ತಿರವಾಗಲ್ಲ... ದೇಗುಲದ ಕಂಬಗಳು ಹೇಗೆ ದೂರವಿದ್ದು ಜೊತೆಯಾಗಿರುತ್ತವೆಯೋ ಹಾಗೆ. ಓಕ್ ಮತ್ತು ಸೈಪ್ರಸ್ ಮರಗಳು ಪರಸ್ಪರ ನೆರಳಲ್ಲಿ ಹೇಗೆ ಬೆಳೆಯುವುದಿಲ್ಲ. ಅಂತಯೇ ಪತಿ ಪತ್ನಿಯರ ಸಂಬಂಧ ಕೂಡ.

ಇಲ್ಲಿ ಗಿಬ್ರಾನ್ ದಂಪತಿಗಳಿಗೆ, ಸಂಗಾತಿಗಳಿಗೆ ಒಳ್ಳೆಯ ಕಿವಿ ಮಾತನ್ನು ಹೇಳಿದ್ದಾನೆ. ಪರಸ್ಪರರಿಗೆ ಒಂದಾಗಲು ನಮ್ಮ ಆತ್ಮಾಭಿಮಾನವನ್ನು ತೊರೆದು ಅಸ್ತಿತ್ವರಹಿತರಾಗಿರುವುದನ್ನು ಆತ ಒಪ್ಪುವುದಿಲ್ಲ. ದಾಂಪತ್ಯ ಎನ್ನುವುದು ಕೊಟ್ಟು ತೆಗೆದುಕೊಳ್ಳುವ ಕ್ರಿಯೆ, ಒಬ್ಬರಿನ್ನೊಬ್ಬರಿಗೆ ಪೂರಕವಾಗಿ ಬೆಳೆಯುವ ಮತ್ತು ಬೆಳೆಸಲ್ಪಡುವ ಈ ಕ್ರಿಯೆಯಲ್ಲಿ ಹಂಚಿಕೊಳ್ಳುವುದನ್ನು ಆತ ಒಪ್ಪುವುದಿಲ್ಲ ಎಂಬುದು ಆತನ ಈ ಸಾಲುಗಳಿಂದ ಅರಿವಾಗುತ್ತದೆ.

**ಆತನ ಕೃತಿ ದ ಪ್ರೊಫೆಟ್ ನ ಕೆಲ ಪ್ರಮುಖ ಸಾಲುಗಳು**

* ಅರ್ಧಂಬರ್ಧ ಜೀವನವನ್ನು ಜೀವಿಸಬೇಡಿ ಮತ್ತು ಅರ್ಧಂಬರ್ಧ ಸಾಯಬೇಡಿ.
* ಮೌನವಾಗಿರುವುದು ನಿಮ್ಮ ಆಯ್ಕೆಯಾದರೆ ಮೌನವಾಗಿರಿ, ಮಾತನಾಡುವುದಾದರೆ ಸಂಪೂರ್ಣವಾಗಿ ನಿಮ್ಮ ಭಾವನೆಗಳನ್ನು ಹೊರಹಾಕಿ.
* ಯಾವುದೇ ಮುಚ್ಚು ಮರೆ ಇಲ್ಲದೆ ಮಾತನಾಡಿ.
* ಯಾವುದನ್ನಾದರೂ ನೀವು ಒಪ್ಪಿಕೊಳ್ಳುವುದಾದರೆ ಅದರ ಬಗ್ಗೆ ನಿಮಗೆ ಸ್ಪಷ್ಟತೆಯಿರಲಿ, ನಿಮ್ಮ ಅಪೂರ್ಣ ಒಪ್ಪಿಗೆ ನಿಮ್ಮ ನಿರಾಕರಣೆಯಲ್ಲಿನ ಅಸ್ಪಷ್ಟತೆಯನ್ನು ತೋರುತ್ತದೆ.
* ಅರ್ಧ ಪರಿಹಾರಗಳಲ್ಲಿ ಅರ್ಧ ಸತ್ಯಗಳಲ್ಲಿ ನಂಬಿಕೆ ಇಡಬೇಡಿ. ಅರ್ಧ ಕನಸುಗಳನ್ನು ಕೂಡ ಕಾಣಬೇಡಿ.
* ಅರೆಭರವಸೆಗಳ ಮೇಲೆ ನಂಬಿಕೆ ಬೇಡ
* ಅರ್ಧ ದಾರಿಯು ನಿಮ್ಮನ್ನೆಲ್ಲೂ ಕೊಂಡೊಯ್ಯದು

ನೀವು ಒಬ್ಬ ಸಂಪೂರ್ಣ ವ್ಯಕ್ತಿಯಾಗಿದ್ದು ಜೀವನವನ್ನು ಅನುಭವಿಸಿ.

ಮಕ್ಕಳ ಕುರಿತಾಗಿಯೂ ಗಿಬ್ರಾನ್ ನಿಮ್ಮ ಮಕ್ಕಳು ನಿಮ್ಮಿಂದ ಬಂದವರೇ ಹೊರತು ನಿಮ್ಮವರಲ್ಲ. ಅವರು ನಿಮ್ಮ ಮನೆಯಲ್ಲಿದ್ದಾರೆಯೇ ಹೊರತು ಅವರ ಮನೆಗಳು ನಿಮ್ಮವಲ್ಲ ಅವರಿಗೆ ಅವರದ್ದೇ ಆದ ಕನಸುಗಳಿವೆ ಆ ಕನಸುಗಳನ್ನು ನೀವು ನಿಮ್ಮ ಕನಸಿನಲ್ಲಿಯೂ ಕಾಣಲು ಸಾಧ್ಯವಿಲ್ಲ ಎಂದು ಬಹಳ ಮಾರ್ಮಿಕವಾಗಿ ಹೇಳಿದ್ದಾನೆ.

ವರ್ಣಚಿತ್ರಕಾರನಾಗಿ ಪರಿಚಿತನಾದ ಗಿಬ್ರಾನ್ ಮುಂದೆ ಕವಿ, ಕಥೆಗಾರ ಕಾದಂಬರಿ ಮತ್ತು ತತ್ವಜ್ಞಾನಿಯಾಗಿ ಜಗತ್ಪ್ರಸಿದ್ಧನಾದನು. ತನ್ನನ್ನು ಜಗತ್ತಿಗೆ ಪರಿಚಯಿಸಿದ ಹಕ್ಕೇಲಿ ಎಂಬ ಯುವತಿಯನ್ನು ಗಾಢವಾಗಿ ಪ್ರೀತಿಸಿದ್ದ ಗಿಬ್ರಾನ್. ಆದರೆ ಅವರಿಬ್ಬರ ವಿವಾಹಕ್ಕೆ ಹಕ್ಕೇಲಿಯ ಪಾಲಕರು ಒಪ್ಪದ ಕಾರಣ ಗಿಬ್ರಾನ್ ಕೊನೆಯವರೆಗೂ ಅವಿವಾಹಿತನಾಗಿಯೇ ಉಳಿದನು. ಆತನ ಗಾಢ ಪ್ರೀತಿಯ, ತ್ಯಾಗದ ಕುರಿತಾದ ಭಾವಗಳು ಆತನ ಮನಸ್ಸಿನ ಬಿಂಬಗಳೇ ಆಗಿದ್ದು ಆತನನ್ನು ಓರ್ವ ತತ್ವಜ್ಞಾನಿಯಾಗಿಸಿವೆ.

'ದ ಪ್ರೊಫೆಟ್,' ದ ಮ್ಯಾಡ್ ಮ್ಯಾನ್ ಮತ್ತು ಬ್ರೋಕನ್ ವಿಂಗ್ ಗಳು ಆತನ ಮುಖ್ಯ ಕೃತಿಗಳು. ಏಪ್ರಿಲ್ 10 1931 ರಲ್ಲಿ ತನ್ನ 48ನೇ ವಯಸ್ಸಿನಲ್ಲಿ ನ್ಯೂಯಾರ್ಕ್ ನಗರದಲ್ಲಿ ನಿಧನನಾದ ಖಲೀಲ್ ಗಿಬ್ರಾನ್ ಸಮಾಧಿಯು ಇಂದಿನ ಲೆಬನಾನ್ ದೇಶದ ಶರ್ರಿ ಎಂಬ ಸ್ಥಳದಲ್ಲಿ ನಿರ್ಮಿಸಲ್ಪಟ್ಟಿದೆ ಅತ್ಯಂತ ಬಡತನ, ಅನಾರೋಗ್ಯ, ವಲಸೆ ಬಂದ ಸಾವು ನೋವುಗಳನ್ನು ಎದುರಿಸಿಯೂ ಕೂಡ ಪ್ರಪಂಚ ಮೆಚ್ಚಿದ ಕವಿ ದಾರ್ಶನಿಕನಾದ ಖಲೀಲ್ ಗಿಬ್ರಾನ್ ತನ್ನ ಕೃತಿಗಳ ಮೂಲಕ ಓದುಗರ ಮನದಲ್ಲಿ ಅಜರಾಮರನಾಗಿದ್ದಾನೆ.

# ಸಾಮಾಜಿಕ ನ್ಯಾಯ ಹರಿಕಾರ ದೇವರಾಜು ಅರಸು

## ಮುಂಡರಗಿ ನಾಗರಾಜ ಹೇಳಿಕೆ | ಹಿಂದುಳಿದ ವರ್ಗಗಳ ಶೈಕ್ಷಣಿಕ ಅಭಿವೃದ್ಧಿಗೆ ವಿದ್ಯಾರ್ಥಿ ನಿಲಯ ಸ್ಥಾಪಿಸಿದರು



■ **ಹಂಪಿ ಟೈಮ್ಸ್ ಬಳ್ಳಾರಿ**

ಡಿ.ದೇವರಾಜ ಅರಸು ಕರ್ನಾಟಕ ಕಂಡ ಅಪರೂಪದ ರಾಜಕಾರಣಿ. ಸಾಮಾಜಿಕ ನ್ಯಾಯದ ಬಗ್ಗೆ ಆಳವಾದ ಜ್ಞಾನ ಹೊಂದಿದವರು. ಹಾಗಾಗಿ ಅವರನ್ನು ಸಾಮಾಜಿಕ ನ್ಯಾಯದ ಹರಿಕಾರ ಎಂದೇ ಕರೆಯಲಾಗುತ್ತದೆ ಎಂಬುದಾಗಿ ಡಾ.ಬಾಬು ಜಗಜೀವನರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ ಅವರು ಬಣ್ಣಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ನಲ್ಲಚೆರವು ಪ್ರದೇಶದ ಜಿಲ್ಲಾ ಕ್ರೀಡಾಂಗಣ ರಸ್ತೆಯ ವಾಲ್ಮೀಕಿ ಭವನದಲ್ಲಿ ಮಂಗಳವಾರ ಏರ್ಪಡಿಸಿದ ಸಾಮಾಜಿಕ ನ್ಯಾಯದ ಹರಿಕಾರ, ಹಿಂದುಳಿದ ವರ್ಗಗಳ ನೇತಾರ ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಡಿ.ದೇವರಾಜ ಅರಸು ಅವರ 109ನೇ ಜನ್ಮದಿನಾಚರಣೆಯ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಹಿಂದುಳಿದ ವರ್ಗಗಳ ಶೈಕ್ಷಣಿಕ ಅಭಿವೃದ್ಧಿಗೆ ರಾಜ್ಯದಲ್ಲಿ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿದರು. ವಿದ್ಯಾರ್ಥಿಗಳು ಹಾಸ್ಟೆಲ್‌ಗಳ ಸದುಪಯೋಗಪಡೆದುಕೊಂಡು, ತಮ್ಮ ಅಮೂಲ್ಯ ಜೀವನವನ್ನು ರೂಪಿಸಿಕೊಳ್ಳಬೇಕು ಎಂದು ಯುವ ಸಮೂಹಕ್ಕೆ ಕಿವಿಮಾತು ಹೇಳಿದರು.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಮಾತನಾಡಿ, ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಾಮಾಜಿಕ ನ್ಯಾಯ ಸಿಗಬೇಕು ಎಂಬುದನ್ನು ಪ್ರತಿಪಾದಿಸಿ, ರೈತರ ಆಶಾಕಿರಣರಾದವರು ಡಿ.ದೇವರಾಜು ಅರಸುರವರು ಎಂದು ಹೇಳಿದರು.

ರೈತಾಪಿ ಜನರ ನೋವು-ನಲಿವುಗಳನ್ನು ಬಲ್ಲವರಾಗಿದ್ದರು. ಕೃಷಿ ಕೆಲಸ ಮಾಡುತ್ತಿದ್ದ ಅವರು ರೈತರ ಕಷ್ಟಗಳನ್ನು ಮನಗಂಡಿದ್ದರು. ಹಾಗಾಗಿ ಭೂ ಸುಧಾರಣೆ ವಿಷಯದಲ್ಲಿ ಉಳುವವನೆ ಭೂಮಿ ಒಡೆಯ ಯೋಜನೆ ಜಾರಿಗೊಳಿಸಿದರು ಎಂದು ತಿಳಿಸಿದರು.

ಮಹನೀಯರ ಮಾರ್ಗದರ್ಶನದಲ್ಲಿ ಯುವಪೀಳಿಗೆಯು ಸಾಗಬೇಕು ಮತ್ತು ಅವರ ಕನಸುಗಳನ್ನು ನನಸಾಗಿಸಬೇಕು ಎಂದರು.

ಕೊಟ್ಟೂರು ಸ್ವಾಮಿ ಶಿಕ್ಷಣ ಮಹಾವಿದ್ಯಾಲಯ ಸಹ ಪ್ರಾಧ್ಯಾಪಕ ಡಾ.ಸುರೇಶ್‌ಬಾಬು ಅವರು ವಿಶೇಷ ಉಪನ್ಯಾಸದಲ್ಲಿ ಮಾತನಾಡಿ, ಡಿ. ದೇವರಾಜು ಅರಸು ಅವರು, ಜೀತದಾಳು ಹಾಗೂ ಮಲ ಹೊರುವ ಪದ್ಧತಿ ನಿಷೇಧಿಸುವ ಮೂಲಕ ಪ್ರಜಾಪ್ರಭುತ್ವಕ್ಕೆ ಅರ್ಥ ಕಲ್ಪಿಸಿದರು. ಎಲ್ಲಾ ಬಡವರಿಗೆ ವಸತಿ ಸೌಲಭ್ಯ, ಶಿಕ್ಷಣದಲ್ಲಿ ಸಮಾನತೆ ಕಲ್ಪಿಸುವ ಮೂಲಕ ಸಮಾಜಮುಖಿಯಾಗಿ ಕೆಲಸ ಮಾಡಿದವರು ಎಂದು ತಿಳಿಸಿದರು.

ಕೇಂದ್ರದ 20 ಅಂಶಗಳು ಸೇರಿದಂತೆ ನೂರಾರು ಕಾಯ್ದೆ, ಕಾನೂನುಗಳನ್ನು ಮಾಡಿ ಪ್ರಜಾಪ್ರಭುತ್ವದ ಮೌಲ್ಯವನ್ನು ಪ್ರತಿಪಾದಿಸಿದರು. ಎರಡು ಬಾರಿ ಮುಖ್ಯಮಂತ್ರಿ ಆಗಿದ್ದ ದೇವರಾಜ ಅರಸು ಅವರು ಕರ್ನಾಟಕದ ಜನತೆಯ ಹೃದಯದಲ್ಲಿ ಶಾಶ್ವತ ಸ್ಥಾನ ಪಡೆದಿದ್ದಾರೆ. ಅಪರೂಪದ ಜನಸೇವಕರಾಗಿ ಜನಮಾನಸದಲ್ಲಿ ಇಂದಿಗೂ ದೇವರಾಜ ಅರಸರು ಕಂಗೊಳಿಸುತ್ತಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಜನ್ಮ ದಿನಾಚರಣೆ ಅಂಗವಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಜಲಾಲಪ್ಪ ಅವರು ಸದ್ಭಾವನಾ ದಿನಾಚರಣೆಯ ಪ್ರತಿಜ್ಞೆ ವಿಧಿ ಭೋದಿಸಿದರು.

ಕಾರ್ಯಕ್ರಮಕ್ಕೂ ಮುನ್ನ ಡಿ.ದೇವರಾಜು ಅರಸು ಅವರ ಭಾವಚಿತ್ರಕ್ಕೆ ಗಣ್ಯರು ಪುಷ್ಪನಮನ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿಲಯದ ಅತಿ ಹೆಚ್ಚು ಅಂಕ ಪಡೆದ ಹಾಗೂ ವಿವಿಧ ಚಟುವಟಿಕೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ ಮೇಯರ್ ಮುಲ್ಲಂಗಿ ನಂದೀಶ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಜಿಲ್ಲಾಧ್ಯಕ್ಷ ಚಿದಾನಂದಪ್ಪ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನವೀನ್ ಕುಮಾರ್ ಸೇರಿದಂತೆ ಜಿಲ್ಲೆಯ ಚುನಾಯಿತ ಪ್ರತಿನಿಧಿಗಳು, ಹಿಂದುಳಿದ ವರ್ಗಗಳ ವಿವಿಧ ಸಂಘ ಸಂಸ್ಥೆಗಳ ಅಧ್ಯಕ್ಷರು, ಪದಾಧಿಕಾರಿಗಳು, ಇಲಾಖೆಯ ನೌಕರರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು.



**ಕವಿ ಮನಸು**

## ಜ್ಯೋತಿ ಸ್ವರೂಪ



ಶರಣು ಹರಿಹರ ತನಯಾ
ಮಣಿಕಂಠ ಜ್ಯೋತಿ ಸ್ವರೂಪ
ಕಲಿಯುಗ ವರದಾ ದಯೆ ತೋರೋ

ಅಯ್ಯಪ್ಪ ಕಾಯೊ ತಂದೆ
ನಾ ನಿನ್ನ ನೋಡಲೆಂದೆ
ಇರುಮುಡಿಯ ಹೊತ್ತು ಬಂದೆ
ಬೇಡಿ ದರ್ಶನ ॥ಅಯ್ಯಪ್ಪ॥

ಉದಯದಲ್ಲಿ ಎದ್ದು ಬೇಗ ಶುದ್ಧನಾಗುವೆ
ಅನ್ನದಾನ ಪ್ರಭುವೆ ನಿನ್ನ ನಿತ್ಯ ನೆನೆಯುವೆ
ನಿನ್ನ ಒಲುಮೆ ದೊರೆತರಾಗ ಬಾಳು
ಸಾರ್ಥಕ
ಬಾಳ ನಡತೆ ಶುದ್ಧವಿರಿಸೆ ನೀನು ಪ್ರೇರಕ

ಕಪ್ಪು ಉಡುಗೆ ತೊಟ್ಟು ಕಠಿಣ ವ್ರತವ
ಮಾಡಿದೇ
ನಿನ್ನ ಚರಣ ಸೇವೆ ಗೈವ ಆಸೆಯೊಂದಿಗೆ
ಹಗಲು ಇರುಳು ನಿನ್ನ ನಾಮ ಮನದೆ
ಪಠಿಸಿದೆ
ಭಕ್ತ ಬಂಧು ದೇವ ನೀನು ಒಲಿಯಬಾರದೇ

ಪಂಪ ನದಿಯ ತೀರ್ಥದಲ್ಲಿ ಶುದ್ಧನಾದೆನು
ಶಬರಿ ಗಿರಿಯ ಮೇಲೆ ನಾನು ಏರಿ ಬಂದೆನು
ಮಕರ ಜ್ಯೋತಿ ಕಂಡು ನಾನು
ಪುಳಕಗೊಂಡೆನು
ಕರುಣದಿಂದ ಕಾವುದೆಮ್ಮ ನಿತ್ಯ ಮಣಿವೆನು॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ತೊಟ್ಟಿಲು



ಎಂಥಾ ತೊಟ್ಟಿಲು ನೋಡವ್ವ
ಕಿನ್ನಾಳ ಮಾಟದ ತೊಟ್ಟಿಲು
ಎಂಥ ತೊಟ್ಟಿಲು ನೋಡವ್ವ

ಚಂದ ಚಂದದ ಬಣ್ಣವ್ವ
ತೊಟ್ಟಿಲಿಗೆ ಹಚ್ಚಿದ ಬಣ್ಣ
ಕಣ್ಣಿಗೆ ಮಹದಾನಂದ ಕಾಣವ್ವ

ತವರಿನವರು ಕೊಟ್ಟ ತೊಟ್ಟಲವ್ವ
ನಮ್ಮಪ್ಪ ಅಮ್ಮನ ನೆನಪಿನ
ತೊಟ್ಟಿಲು ಇದ ನೋಡವ್ವ

ನಮ್ಮೂರ ಬಡಿಗೇರ ಮಾನಪ್ಪ
ಮನಸ ಇಟ್ಟು ಮಾಡಿದ
ಈ ಚಂದದ ತೊಟ್ಟಿಲಪ್ಪ

ಚಂದದ ಗುಬ್ಬಿಗಳಂದ
ನೋಡುತ ಮಲಗಿದ ಎನ್ನ ಕಂದ
ಇದು ಮಾಯದ ತೊಟ್ಟಿಲವ್ವ

ತೊಟ್ಟಿಲಿಗೆ ಹಚ್ಚಿದ ಬಣ್ಣವ
ನೋಡುತ್ತಾ ಮುದ್ದಿನ ಕಂದಗೆ
ಹಾಯಾದ ನಿದ್ದೆ ನೋಡವ್ವ

ತೊಟ್ಟಿಲಿಗೆ ಕಟ್ಟಿದ ಗೊಂಬೆಗಳು
ಹಾರಾಡುತ್ತ ಎನ್ನ ಕಂದನ
ಕಣ್ಣಿಗೆ ನಿದ್ದೆಯ ತಂದವು ನೋಡವ್ವ

– ಕೆ ಎಂ ಬಸವರಾಜ ಹೊಸಪೇಟೆ

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ಬ್ರಹ್ಮಶ್ರೀ ನಾರಾಯಣ ಗುರುಗಳ ಆದರ್ಶ-ತತ್ವಗಳನ್ನು ಪಾಲಿಸೋಣ

## ಮಹಾನಗರ ಪಾಲಿಕೆ ಮೇಯರ್ ಮುಲ್ಲಂಗಿ ನಂದೀಶ್ ಹೇಳಿಕೆ

■ ಹಂಪಿ ಟೈಮ್ಸ್ ಬಳ್ಳಾರಿ

ಆಡಂಭರ ಜೀವನಕ್ಕೆ ಒತ್ತು ನೀಡದೇ ಸರಳ ಜೀವನ ನಡೆಸಲು ಬ್ರಹ್ಮಶ್ರೀ ನಾರಾಯಣ ಗುರು ಅವರ ಆದರ್ಶ–ತತ್ವಗಳನ್ನು ಪಾಲಿಸೋಣ ಎಂದು ಮಹಾನಗರ ಪಾಲಿಕೆಯ ಮೇಯರ್ ಮುಲ್ಲಂಗಿ ನಂದೀಶ್ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಮಂಗಳವಾರ ಏರ್ಪಡಿಸಿದ್ದ ಬ್ರಹ್ಮಶ್ರೀ ನಾರಾಯಣ ಗುರು ಜಯಂತ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಬ್ರಹ್ಮಶ್ರೀ ನಾರಾಯಣ ಗುರು ಅವರು ಒಂದೇ ಜಾತಿ, ಒಂದೇ ಮತ, ಒಬ್ಬರೇ ದೇವರು ಎನ್ನುವ ಸಾರವನ್ನು ಜನ ಸಾಮಾನ್ಯರಿಗೆ ತಿಳಿಸುತ್ತಾ, ಸಕಲರಲ್ಲಿಯೂ ಸಾಮರಸ್ಯ ಭಾವನೆ ಮೂಡಿಸಿದವರು ಎಂದು ತಿಳಿಸಿದರು.

ಸಮಾಜದಲ್ಲಿನ ಅನಿಷ್ಠ ಪದ್ಧತಿಗಳ ನಿರ್ಮೂಲನೆ ಮಾಡಲು ಪಣತೊಟ್ಟಿದ್ದ ಬ್ರಹ್ಮಶ್ರೀ ನಾರಾಯಣ ಗುರು ಅವರು, ಸಾರ್ವಜನಿಕರನ್ನು ಅಜ್ಞಾನದಿಂದ ಜ್ಞಾನದೆಡೆಗೆ ನಡೆಸಿ, ಸ್ವಸ್ಥ ಸಮಾಜ ನಿರ್ಮಾಣ ಗುರಿ ಹೊಂದಿದ್ದರು ಎಂದರು.

ಡಾ.ಬಾಬು ಜಗಜೀವನರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ ಅವರು ಮಾತನಾಡಿ,



ನಾರಾಯಣ ಗುರು ಅವರು ಹಿಂದುಳಿದ, ದೀನ ದಲಿತರ ರುವಾರಿ ಹಾಗೂ ಮೂಡ ನಂಬಿಕೆ, ಜೀತ ಪದ್ಧತಿ, ದೇವದಾಸಿ ಪದ್ಧತಿ, ಸತಿ ಸಹಗಮನ ಪದ್ಧತಿ ಸೇರಿದಂತೆ ಅನೇಕ ಸಾಮಾಜಿಕ ಶೋಷಣೆಗಳ ವಿರುದ್ಧ ಧ್ವನಿ ಎತ್ತಿದವರು.ಕಾರ್ಯ ಸಾಧನೆ ಶ್ಲಾಘನೀಯ ಎಂದು ಹೇಳಿದರು.

ಬಳ್ಳಾರಿಯ ಸತ್ಯಂ ಶಿಕ್ಷಣ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಆಲಂಭಾಷ ವಿಶೇಷ ಉಪನ್ಯಾಸದಲ್ಲಿ ಮಾತನಾಡಿ, ಮಹಾನ್ ಚೇತನರಾದ ಬ್ರಹ್ಮಶ್ರೀ ನಾರಾಯಣ ಗುರು ಅವರು ಜ್ಞಾನದ ಮಾರ್ಗ ಅನುಸರಿಸಿ, ಸಮಾಜದ ಏಳಿಗೆಗಾಗಿ ಶ್ರಮಪಟ್ಟವರು. ಇಂದಿನ ಯುವ ಸಮೂಹವು ಬ್ರಹ್ಮಶ್ರೀ ನಾರಾಯಣ ಗುರು ಅವರ ಸದ್ಗುಣಗಳನ್ನು ಅನುಸರಿಸುತ್ತಾ, ಸಮಾಜ ನಿರ್ಮಿಸಲು ಕೈಜೋಡಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮಕ್ಕೂ ಮುನ್ನ ಬ್ರಹ್ಮಶ್ರೀ ನಾರಾಯಣ ಗುರು ಅವರ ಭಾವಚಿತ್ರಕ್ಕೆ ಗಣ್ಯರು ಪುಷ್ಪನಮನ ಸಲ್ಲಿಸಿದರು. ಬಳ್ಳಾರಿಯ ಸಾಯಿಶ್ರುತಿ ಅವರ ವಚನ ಸಂಗೀತವು ಕಾರ್ಯಕ್ರಮದಲ್ಲಿ ಸಂಗೀತ ಕಡಲಲ್ಲಿ ತೇಲಿಸಿತು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ಜಿಲ್ಲಾ ಆರ್ಯ ಈಡಿಗ ಗೌನ ಮಹಾಜನ ಸಭಾದ ಜಿಲ್ಲಾಧ್ಯಕ್ಷ ಹೆಚ್.ಆರ್ ಶ್ರೀನಾಥ ಸೇರಿದಂತೆ ಸಮಾಜದ ಮುಖಂಡರು, ಇಲಾಖೆ ಸಿಬ್ಬಂದಿ ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಇಂದು ಕೊಪ್ಪಳದಲ್ಲಿ ಮುಖ್ಯಮಂತ್ರಿಗಳ ಪ್ರವಾಸ

■ ಹಂಪಿ ಟೈಮ್ಸ್ ಕೊಪ್ಪಳ

ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಆಗಸ್ಟ್ 21ರಂದು ಕೊಪ್ಪಳ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ.

ಅಂದು ಬೆಳಗ್ಗೆ 10 ಗಂಟೆಗೆ ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದ ಮೂಲಕ ಹೊರಟು ಬೆಳಗ್ಗೆ 10.50ಕ್ಕೆ ಕೊಪ್ಪಳದ ಗಿಣಿಗೇರಾ ಏರ್‌ಸ್ಟ್ರೀಪ್‌ಗೆ ಆಗಮಿಸುವರು. ಅಲ್ಲಿಂದ ಬೆಳಗ್ಗೆ 11ಕ್ಕೆ ನಿರ್ಗಮಿಸಿ ರಸ್ತೆಯ ಮೂಲಕ ಕುಷ್ಟಗಿ, ಇಳಕಲ್ ಮಾರ್ಗವಾಗಿ ಮಧ್ಯಾಹ್ನ 12.30ಕ್ಕೆ ವಿಜಯಪುರ ಜಿಲ್ಲೆಯ ನಿಡಗುಂದಿ ತಾಲ್ಲೂಕಿನ ಆಲಮಟ್ಟಿಯ ಲಾಲ್ ಬಹದ್ದೂರ್ ಶಾಸ್ತ್ರಿ ಜಲಾಶಯಕ್ಕೆ ಬಾಗಿನ ಅರ್ಪಣೆ ಮಾಡುವರು.

ಮಧ್ಯಾಹ್ನ 3 ಗಂಟೆಗೆ ಆಲಮಟ್ಟಿಯಿಂದ ನಿರ್ಗಮಿಸಿ 04.30ಕ್ಕೆ ಗಿಣಿಗೇರಾ ಏರ್‌ಸ್ಟ್ರೀಪ್‌ಗೆ ಆಗಮಿಸಿ, ಅಲ್ಲಿಂದ 04.40ಕ್ಕೆ ವಿಶೇಷ ವಿಮಾನದ ಮೂಲಕ ಬೆಂಗಳೂರಿಗೆ ಪ್ರಯಾಣ ಬೆಳೆಸುವರು ಎಂದು ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೆಎಎಸ್,ಎಫ್‌ಡಿಎ,ಎಸ್‌ಡಿಎ ಕೋಚಿಂಗ್‌ಗೆ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲಾ ಖನಿಜ ಪ್ರತಿಷ್ಠಾನ (ಡಿಎಂಎಫ್) ಅನುದಾನದಡಿ ಬಳ್ಳಾರಿ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ವಿದ್ಯಾರ್ಥಿಗಳಿಗೆ ಕೆಎಎಸ್, ಎಫ್‌ಡಿಎ ಮತ್ತು ಎಸ್‌ಡಿಎ ಹುದ್ದೆಗೆ ಆಯ್ಕೆಯಾಗಲು ಉಚಿತ ತರಬೇತಿ ನೀಡಲು ಉದ್ದೇಶಿಸಲಾಗಿದ್ದು, ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ತಿಳಿಸಿದ್ದಾರೆ.

ಅಭ್ಯರ್ಥಿಗಳನ್ನು ಲಿಖಿತ ಪರೀಕ್ಷೆಯ ಮೂಲಕ ಆಯ್ಕೆ ಮಾಡಲಾಗುವುದು.

ಅರ್ಜಿ ಸಲ್ಲಿಸಲು https://ballari.nic.in ವೆಬ್‌ಸೈಟ್‌ಗೆ ನೀಡಬೇಕು. ಅರ್ಜಿ ಸಲ್ಲಿಸಲು ಆ.29 ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಮೊ.9964502514, 9844444958 ಗೆ ಸಂಪರ್ಕಿಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪ್ರಾಥಮಿಕ ಶಾಲಾ ಶಿಕ್ಷಕರ ಸೇವಾ ಪುಸ್ತಕದಲ್ಲಿ ತಿದ್ದುಪಡಿಗಳಿದ್ದರೆ ಸರಿಪಡಿಸಿಕೊಳ್ಳಿ

**ಮೊದಲ ಪುಟದಿಂದ**

ಕ್ಷೇತ್ರ ಸಮನ್ವಯಧಿಕಾರಿ ಶಿವಕುಮಾರ್ ಮಾತನಾಡಿ, ಪ್ರೌಢ ಶಾಲಾ ಶಿಕ್ಷಕರಿಗೆ ಸೇವಾ ಪುಸ್ತಕಗಳು ಆಯಾ ಶಾಲೆಯಲ್ಲಿಯೇ ಇರುತ್ತವೆ. ಆದರೆ ಪ್ರಾಥಮಿಕ ಶಾಲಾ ಶಿಕ್ಷಕರ ಸೇವಾ ಪುಸ್ತಕಗಳು ಬಿ.ಇ.ಓ. ಕಚೇರಿಯಲ್ಲಿರುವುದರಿಂದ ಅವರು ವರ್ಷಕ್ಕೊಮ್ಮೆ ಪರಿಶೀಲಿಸಿಕೊಳ್ಳಲು ಸೂಕ್ತ ವೇದಿಕೆ ಗುರುಸ್ಪಂದನ ಕಾರ್ಯಕ್ರಮವಾಗಿದೆ. ಇದನ್ನು ಆಯೋಜಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯ ಶ್ಲಾಘನೀಯ ತಾಲೂಕಿನ ಶಿಕ್ಷಕರು ಇದರ ಸದುಪಯೋಗ ಪಡಿಸಿಕೊಳ್ಳಬೇಕೆಂದು ತಿಳಿಸಿದರು.

ಶಿಕ್ಷಕರ ಸಂಘದ ಅಧ್ಯಕ್ಷ ಬಸವರಾಜ್.ಕೆ. ಮಾತನಾಡಿ, ಶಿಕ್ಷಕರು ಸೇವಾ ಪುಸ್ತಕದಲ್ಲಿ ತಮ್ಮ ಸೇವಾ ವಿವರ, ಗಳಿಕೆ ರಜೆ, ವಿದ್ಯಾರ್ಹತೆ, ಕಾಲಮಿತಿ ಹಾಗೂ ವಾರ್ಷಿಕ ಬಡ್ತಿಗಳು ಮುಂತಾದವುಗಳ ವಿವರ ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಹಿಯೊಂದಿಗೆ ದಾಖಲಾಗಿರುವುದನ್ನ ಖಚಿತಪಡಿಸಿಕೊಳ್ಳ ಬೇಕು ಎಂದರು.

ಸಂಘದ ಕಾರ್ಯದರ್ಶಿ ಮಲ್ಲಯ್ಯ ಮಾತನಾಡಿದರು. ಈ ಸಂದರ್ಭದಲ್ಲಿ ಪತ್ರಾಂಕಿತ ವ್ಯವಸ್ಥಾಪಕ ವೆಂಕಟೇಶ್ ದೇಶಪಾಂಡೆ, ಸಂಘದ ಪದಾಧಿಕಾರಿಗಳಾದ ಕೆ.ಮಾರ್ಗದಪ್ಪ, ಎಲ್. ವಿಜಯಕುಮಾರಿ, ಕಡ್ಲಿವೀರಭದ್ರೇಶ್, ಜಾಕೀರ್‌ಹುಸೇನ್, ಆರ್.ಸುಧಾದೇವಿ, ದ್ಯಾಮಾನಾಯ್ಕ್, ಬಸವನಗೌಡ, ನೀಲಮ್ಮ, ಗುರುಬಸವರಾಜ್, ಪ್ರಕಾಶ್, ಶ್ರೀಧರ್, ಜೀವರಾಜ್,ವಿಷಯಕಾರ್ಯನಿರ್ವಾಹಕರಾದ ವಿರುಪಾಕ್ಷಯ್ಯ, ಕೃಷ್ಣ, ಗೋವಿಂದಪ್ಪ, ಸೇರಿದಂತೆ ಮಲಪನಗುಡಿ ಕಮಲಾಪುರ ಭಾಗದ ಶಿಕ್ಷಕರು ಹಾಜರಿದ್ದರು. ದ್ಯಾಮಾನಾಯ್ಕ್, ಮಲ್ಲಯ್ಯ ನಿರ್ವಹಿಸಿದರು.

# ಕಾಲುವೆಯಲ್ಲಿ ಗಂಡಸಿನ ಶವ ಪತ್ತೆ

■ ಹಂಪಿ ಟೈಮ್ಸ್ ಹೊಸಪೇಟೆ

ತಾಲೂಕಿನ ಕಮಲಾಪುರದ ಹೆಚ್.ಪಿ.ಸಿ ಬಳಿ ಇರುವ ಪೋರ್ ಬೇ ಹತ್ತಿರ ಕಾಲುವೆಯ ನೀರಿನಲ್ಲಿ ಸುಮಾರು 30 ರಿಂದ 40 ವರ್ಷ ವಯಸ್ಸಿನ ಗಂಡಸಿನ ಶವ ಪತ್ತೆಯಾದ ಬಗ್ಗೆ ಕಮಲಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೃತನು ಸುಮಾರು 5–6 ದಿನಗಳ ಹಿಂದೆ ಎಲ್.ಎಲ್.ಸಿ ಕಾಲುವೆಯ ಯಾವುದೋ ಸ್ಥಳದಲ್ಲಿ ಯಾವುದೋ ಕಾರಣಗಳಿಗಾಗಿ ಅಥವಾ ಆಕಸ್ಮಿಕವಾಗಿ ನೀರಿನಲ್ಲಿ ಬಿದ್ದು ಮೃತಪಟ್ಟಂತೆ ಕಂಡುಬರುತ್ತಿದೆ.

ಮೃತ ವ್ಯಕ್ತಿಯ ಚಹರೆ: 5.5 ಅಡಿ ಎತ್ತರ. ಬಲ ಗೈ ಮೇಲೆ ಕನ್ನಡದಿಂದ ನಾಗಮ್ಮ ಎಂದು ಹಚ್ಚೆ ಗುರುತು ಇರುತ್ತದೆ. ಎರಡು ಕಾಲಿನಲ್ಲಿ ಬಿಳಿ ಮತ್ತು ಕರಿ ದಾರ ಇರುತ್ತದೆ. ಈ ಮೃತ ವ್ಯಕ್ತಿಯ ಬಗ್ಗೆ ಗುರುತು ಹಾಗೂ ವಾರಸುದಾರರ ವಿಳಾಸ ಪತ್ತೆಯಾದಲ್ಲಿ ವಿಜಯನಗರ ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಂ.ಸಂ: 9480805700, ಎಸ್.ಪಿ. ವಿಜಯನಗರ ದೂ.ಸಂ: 9480805701ಕ್ಕೆ ಮಾಹಿತಿ ಕಮಲಾಪುರ ಪೊಲೀಸ್ ಠಾಣೆಯ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ; ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಪ್ರಸ್ತಕ ಸಾಲಿನ ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ–1ರ ಅಲೆಮಾರಿ ಮತ್ತು ಅರೆ ಅಲೆಮಾರಿ ವಿದ್ಯಾರ್ಥಿಗಳಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ, ಶುಲ್ಕ ಮರುಪಾವತಿ ಮತ್ತು ವಿದ್ಯಾಸಿರಿ–ಊಟ ಮತ್ತು ವಸತಿ ಸಹಾಯ ಯೋಜನೆ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ವೆಬ್‌ಸೈಟ್ https://ssp.postmatric.karnataka.gov.in ಗೆ ಭೇಟಿ ನೀಡಿ ಸೆ.15 ರೊಳಗಾಗಿ ಅರ್ಜಿ ಸಲ್ಲಿಸಬಹುದು.

ವಿದ್ಯಾರ್ಥಿ ವೇತನಕ್ಕೆ ಸಂಬಂಧಿಸಿದ ವಿವರ, ಅರ್ಹತೆ, ದಾಖಲೆಗಳು ಹಾಗೂ ಸರ್ಕಾರಿ ಆದೇಶಗಳ ಬಗ್ಗೆ ಮಾಹಿತಿಗಾಗಿ ಇಲಾಖೆಯ ವೆಬ್‌ಸೈಟ್‌ಗೆ ಭೇಟಿ ನೀಡಬಹುದು. ಹೆಚ್ಚಿನ ಮಾಹಿತಿಗಾಗಿ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರ ಹತ್ತಿರದ ಡಿ.ದೇವರಾಜ ಅರಸು ಭವನದ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ ಅಥವಾ ಮೊ.8050770005 ಗೆ ಸಂಪರ್ಕಿಸಬಹುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದಾಸೋಹದ ಮೂಲಕ ಸಮಾಜಕ್ಕೆ ಬೆಳಕು ನೀಡಿದ ನುಲಿಯ ಚಂದಯ್ಯ

## ಕಾರಟಗಿ ಶಿಕ್ಷಕ ಜಗದೀಶ್ ಭಜಂತ್ರಿ ಹೇಳಿಕೆ | ಶ್ರೀ ನುಲಿಯ ಚಂದಯ್ಯ ಜಯಂತಿ

■ ಹಂಪಿ ಟೈಮ್ಸ್ ಕೊಪ್ಪಳ

ಕಾಯಕ, ದಾಸೋಹದ ಮೂಲಕ ಸಮಾಜಕ್ಕೆ ಬೆಳಕು ನೀಡಿದ ಶರಣ ನುಲಿಯ ಚಂದಯ್ಯನವರು ಎಂದು ಕಾರಟಗಿಯ ಶಿಕ್ಷಕರಾದ ಜಗದೀಶ್ ಭಜಂತ್ರಿ ಅವರು ಹೇಳಿದರು.

ಕೊಪ್ಪಳ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆಗಸ್ಟ್ 19ರಂದು ನಗರದ ಸಾಹಿತ್ಯ ಭವನದಲ್ಲಿ ಹಮ್ಮಿಕೊಳ್ಳಲಾದ ಶ್ರೀ ನುಲಿಯ ಚಂದಯ್ಯ ಜಯಂತಿಯ ಆಚರಣೆ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿ, ಅವರು ಮಾತನಾಡಿದರು.

12ನೇ ಶತಮಾನದಲ್ಲಿ ನಡೆದ ಕಲ್ಯಾಣ ಕ್ರಾಂತಿಗೆ ಹಲವಾರು ಶಿವಶರಣರು ಶ್ರಮಿಸಿದ್ದಾರೆ. ಇದೊಂದು ಸುವರ್ಣಯುಗವಾಗಿದ್ದು, ಜಗಜ್ಯೋತಿ ಬಸವೇಶ್ವರರು ಹಾಗೂ ಅನೇಕ ಮಹನಿಯರು ಸಮಾಜದ ಅಂಕುಡೊಂಕುಗಳನ್ನು ಸರಿಪಡಿಸಲು ಹೋರಾಡಿದ್ದಾರೆ. ಅನುಭವ ಮಂಟಪದಲ್ಲಿ ಶ್ರೇಷ್ಠ ಶರಣರಲ್ಲಿ ಒಬ್ಬರೂ ಶ್ರೀ ನುಲಿಯ ಚಂದಯ್ಯನವರು. ನೂಲು ತಯಾರಿಸುವ ಕಾಯಕದ ಮೂಲಕ ದಾಸೋಹ ಮಾಡಿಕೊಂಡು ಬಂಧಂತಹ ಶ್ರೇಷ್ಠ ದಾಸೋಹಿಗಳಾಗಿದ್ದರು. ಕಾಯಕದಲ್ಲಿ ಕೈಲಾಸಕಂಡ ಮಹಾನ ಶರಣರು. ಶ್ರೀ ನುಲಿಯ ಚಂದಯ್ಯನವರು 1107ರಲ್ಲಿ ಇಂದಿನ ವಿಜಯಪುರ ಜಿಲ್ಲೆಯಲ್ಲಿ ಜನಿಸಿದ್ದಾರೆ ಮತ್ತು 48 ವಚನಗಳನ್ನು ಬರೆದಿದ್ದರು ಎಂದು ತಿಳಿಯುತ್ತದೆ. ಅವರ 48 ವಚನಗಳು 4 ಸಾವಿರ ವಚನಗಳಿಗೆ ಸಮಾನವಾಗಿದ್ದವು. ಮಹನಿಯರು ಬರೆದಂತಹ ಬಸವ ಪುರಾಣ, ಗುರುರಾಜ ಚರಿತ್ರೆಯಂತಹ ಪುಸ್ತಗಳಲ್ಲಿ ನುಲಿಯ ಚಂದಯ್ಯನವರ ಕುರಿತು ಸವಿಸ್ತಾರವಾಗಿ ಬರೆಯಲಾಗಿದೆ. ಇಂತಹ



ಮಹನಿಯರ ತತ್ವಾದರ್ಶಗಳನ್ನು ನಾವೆಲ್ಲರೂ ಪಾಲಿಸುವುದರ ಜೊತೆಗೆ ಅವುಗಳನ್ನು ನಮ್ಮ ಜೀವನದಲ್ಲಿಯೂ ಅಳವಡಿಸಿಕೊಳ್ಳಬೇಕು. ಅಂದಾಗ ಮಾತ್ರ ನಮ್ಮ ಬದುಕು ಸಾರ್ಥಕವಾಗುತ್ತದೆ ಎಂದರು.

ಸಮಾಜದ ಮುಖಂಡರಾದ ಲಕ್ಷ್ಮಣ ಮಾಳಗಿ ಅವರು ಮಾತನಾಡಿ, ಶ್ರೀ ನುಲಿಯ ಚಂದಯ್ಯನವರು ತಮ್ಮ ವಚನಗಳ ಮೂಲಕ ಕಲ್ಯಾಣ ಕ್ರಾಂತಿಗೆ ಶ್ರಮಿಸಿದ್ದಾರೆ. ಇಂತಹ ಶರಣರ ಜಯಂತಿಯನ್ನು ಸರ್ಕಾರದಿಂದ ಆಚರಿಸಲಾಗುತ್ತಿದ್ದು, ಇದು ಮೂರನೇ ವರ್ಷದ ಕಾರ್ಯಕ್ರಮವಾಗಿದೆ. ಕೊರಮ ಸಮಾಜದವರು ಉದ್ಯೋಗಕ್ಕಾಗಿ ಊರೂರಿಗೆ ಹೋಗುತ್ತಾರೆ. ಆದ್ದರಿಂದ ನಮ್ಮ ಸಮಾಜವು ಪರಿಶಿಷ್ಟ ಜಾತಿಯ ಅಲೇಮಾರಿ ಜನಾಂಗಕ್ಕೆ ಒಳಪಡುತ್ತದೆ. ನಮ್ಮ ಸಮುದಾಯವರಿಗೆ ಸರ್ಕಾರದ ವಿವಿಧ ಸೌಲಭ್ಯಗಳಿದ್ದು, ಅವುಗಳನ್ನು ಸದುಪಯೋಗ ಪಡೆದುಕೊಳ್ಳಬೇಕು. ವಿಶೇಷವಾಗಿ ಹಾಸ್ಟೆಲ್‌ಗಳ ಪ್ರವೇಶಕ್ಕೂ ಸ್ಥಾನಗಳ ಮೀಸಲಾತಿಯಿದ್ದು, ಇದರ ಸದುಪಯೋಗದೊಂದಿಗೆ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬೇಕು ಎಂದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಕೊಟ್ರೇಶ್ ಮರಬನಳ್ಳಿ, ಸಮಾಜದ ಮುಖಂಡರಾದ ಕಂಬಣ್ಣ ಭಜಂತ್ರಿ, ಬಸವರಾಜ ಭಜಂತ್ರಿ, ಲಕ್ಷ್ಮಣ ಭಜಂತ್ರಿ, ನಾಗರಾಜ ಭಜಂತ್ರಿ, ಭೀಮಣ್ಣ ಭಜಂತ್ರಿ, ಪರಶುರಾಮ ಭಜಂತ್ರಿ, ತಿಪ್ಪಣ್ಣ ಭಜಂತ್ರಿ, ಶಿವಕುಮಾರ ಗೊಂಡಬಾಳ, ವಿಜಯಕುಮಾರ ಹಾಲಳ್ಳಿ, ಯಮನೂರಪ್ಪ ಭಜಂತ್ರಿ, ಭೀಮಣ್ಣ ಕಾಮನೂರ, ತಿಪ್ಪಣ್ಣ, ಯಮನೂರಪ್ಪ ಕೊಪ್ಪಳ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಶ್ರೀ ನುಲಿಯ ಚಂದಯ್ಯ ಜಯಂತಿಯ ನಿಮಿತ್ತ ಅತ್ಯುತ್ತಮ ಅಂಕ ಪಡೆದ ವಿದ್ಯಾರ್ಥಿಗಳಿಗೆ ಹಾಗೂ ವಿಶೇಷ ಉಪನ್ಯಾಸ ನೀಡಿದ ಕಾರಟಗಿಯ ಶಿಕ್ಷಕರಾದ ಜಗದೀಶ್ ಭಜಂತ್ರಿ ಅವರಿಗೆ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು. ಪೊಲೀಸ್ ಇಲಾಖೆಯ ಕರಿಬಸಪ್ಪ ಕಾರ್ಯಕ್ರಮ ನಿರೂಪಿಸಿದರು.

ಮೆರವಣಿಗೆ: ಶ್ರೀ ನುಲಿಯ ಚಂದಯ್ಯ ಜಯಂತಿ ಅಂಗವಾಗಿ ಇಂದು ಬೆಳಿಗ್ಗೆ ನಗರದ ಶ್ರೀಗವಿಸಿದ್ದೇಶ್ವರ ಮಠದ ಆವರಣದಿಂದ ಸಾಹಿತ್ಯ ಭವನದವರೆಗೆ ನಡೆದ ಮೆರವಣಿಗೆಗೆ ಕೊಪ್ಪಳ ಉಪವಿಭಾಗಾಧಿಕಾರಿಗಳಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ ಅವರು ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಗವಿಸಿದ್ದೇಶ್ವರ ಶ್ರೀಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಕೊಟ್ರೇಶ್ ಮರಬನಳ್ಳಿ ಸೇರಿದಂತೆ ಸಮಾಜದ ಮುಖಂಡರು ಉಪಸ್ಥಿತರಿದ್ದರು.

# ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಸಾಲ–ಸೌಲಭ್ಯಕ್ಕಾಗಿ ಅರ್ಜಿ ಅಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ 2024–25ನೇ ಸಾಲಿನಲ್ಲಿ ಅರಿವು ಯೋಜನೆಯಡಿ ಸಾಲ ಸೌಲಭ್ಯ ಪಡೆಯಲು ಮತೀಯ ಅಲ್ಪಸಂಖ್ಯಾತರಿಂದ ನಿಗದಿತ ನಮೂನೆಯಲ್ಲಿ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವತಿಯಿಂದ 2024–25ನೇ ಸಾಲಿನಲ್ಲಿ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್ಖ್, ಪಾರ್ಸಿ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳಿಂದ ಅರಿವು (ರಿನ್ಯೂವಲ್ ಸಿಇಟಿ, ನೀಟ್) ಶೈಕ್ಷಣಿಕ ಸಾಲ ಯೋಜನೆಯಡಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

**ಅರ್ಹತೆ:** ಈ ಹಿಂದೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಸಿಇಟಿ, ನೀಟ್, ಡಿ–ಸಿಇಟಿ, ಪಿಜಿ–ಸಿಇಟಿ ಯಲ್ಲಿ ಆಯ್ಕೆಯಾದ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಾದ ವೈದ್ಯಕೀಯ (ಎಂಬಿಬಿಎಸ್, ಎಂಡಿ, ಎಂಎಸ್) ಹಾಗೂ ದಂತ ವೈದ್ಯಕೀಯ (ಬಿಡಿಎಸ್, ಎಂಡಿಎಸ್) ಹಾಗೂ ಬಿಇ, ಬಿಟೆಕ್, ಬ್ಯಾಚುಲರ್ ಆಫ್ ಆರ್ಕಿಟೆಕ್ಚರ್, ಎಂ.ಆರ್ಕಿಟೆಕ್ಚರ್ ಮತ್ತು ಆಯುಷ್ (ಬಿಆಯುಷ್, ಎಂಆಯುಷ್), ಎಂಬಿಎ, ಎಂಸಿಎ, ಎಲ್‌ಎಲ್‌ಬಿ, ಬಿಎಸ್ಸಿ ಇನ್ ಹಾರ್ಟಿಕಲ್ಚರ್, ಅಗ್ರಿಕಲ್ಚರಲ್ ಇಂಜಿನಿಯರಿಂಗ್, ಡೈರಿ ಟೆಕ್ನಾಲಜಿ, ಫಾರೆಸ್ಟ್ರಿ, ವೆಟೆರಿನರಿ ಅಂಡ್ ಅನಿಮಲ್ ಟೆಕ್ನಾಲಜಿ, ಫಿಶರಿಸ್ ಸೆರಿಕಲ್ಚರಲ್, ಬಿಫಾರ್ಮ್, ಎಂಫಾರ್ಮ್, ಫಾರ್ಮ ಡಿ ಅಂಡ್ ಡಿ.ಫಾರ್ಮ ಗಳಲ್ಲಿ ಆಯ್ಕೆಯಾಗಿರುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಸೌಲಭ್ಯ ನೀಡಲಾಗುವುದು.

**ದಾಖಲೆಗಳು:** ಬೊನಾಫೈಡ್ ಅಥವಾ ಅಧ್ಯಯನ ಪ್ರಮಾಣ ಪತ್ರ, ಕಾಲೇಜು ಶುಲ್ಕದ ವಿವರ, ಹಿಂದಿನ ವರ್ಷ ಪಾಸಾದ ಅಂಕಪಟ್ಟಿ, ಕಾಲೇಜು ಬ್ಯಾಂಕ್ ವಿವರ, ಭದ್ರತಾ ಠೇವಣಿ (ಸಾಲದ ಮೊತ್ತದ ಶೇ.12) ಪಾವತಿ ಮಾಡಿದ ರಶೀದಿ, ಕೆಇಎ ದಾಖಲಾತಿ ಆದೇಶ ಪ್ರತಿ, ವಿದ್ಯಾರ್ಥಿಯ ಸ್ವಯಂ ಘೋಷಣೆ ಪತ್ರ, ಪೋಷಕರ ಸ್ವಯಂ ಘೋಷಣೆ ಪತ್ರ.

ನಿಗಮದಿಂದ ಈ ಹಿಂದಿನ ವರ್ಷದಲ್ಲಿ ಪಡೆದಿರುವ ಒಟ್ಟು ಸಾಲದ ಬಾಕಿಯ ಮೊತ್ತದ ಶೇ.12 ರಷ್ಟು ಮೊತ್ತ ಆನ್‌ಲೈನ್ ಮುಖಾಂತರ ಪಾವತಿಸಬೇಕು ಅಥವಾ ಜಿಲ್ಲಾ ಕಚೇರಿಗೆ ಪಾವತಿಸಬೇಕು.

ಈ ಹಿಂದೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಆಯ್ಕೆಯಾಗಿದ್ದು, ಬೇರೆ ಬೇರೆ ವರ್ಷಗಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಅರಿವು ವಿದ್ಯಾಭ್ಯಾಸ ಸಾಲ ಪಡೆಯದಿದ್ದಲ್ಲಿ ಅಂತಹ ವಿದ್ಯಾರ್ಥಿಗಳು ಸಹ ಅರ್ಜಿ ಸಲ್ಲಿಸಬಹುದು. ರಿನ್ಯೂವಲ್ ಮೊತ್ತವನ್ನು ಪಾವತಿಸುವುದು ಅಗತ್ಯವಿರುವುದಿಲ್ಲ.

ಅರ್ಜಿ ಸಲ್ಲಿಸಲು https://kmdconline.karnataka.gov.in/ ಗೆ ಭೇಟಿ ನೀಡಬಹುದು. ಅರ್ಜಿ ಸಲ್ಲಿಸ ಅಕ್ಟೋಬರ್ 31 ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಂಟೋನ್‌ಮೆಂಟ್‌ನ ವಿಜಯನಗರ ಕಾಲೋನಿಯ ಹಳೇ ಮಾರುಕಟ್ಟೆ ರಸ್ತೆಯ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ನಿ)ದ ಜಿಲ್ಲಾ ವ್ಯವಸ್ಥಾಪಕರ ಕಚೇರಿ ಅಥವಾ ದೂ.08392–294370 ಗೆ ಸಂಪರ್ಕಿಸಿ.

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಶ್ರಾವಣ । ಸಂವತ್ಸರ: ಕ್ರೋಧಿ

**21–08–2024 – ಬುಧವಾರ**

| | |
|---|---|
| ತಿಥಿ | : ದ್ವಿತೀಯ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಪೂರ್ವಭಾದ್ರಪದ |
| ಯೋಗ | : ಸುಕರ್ಮ |
| ಕರಣ | : ತೈತುಲ |
| ಸೂರ್ಯೋದಯ | : 06:06:37 |
| ಸೂರ್ಯಾಸ್ತ | : 18:52:58 |
| ರಾಹು ಕಾಲ | : 12:30–14:06 |
| ಯಮಘಂಡ ಕಾಲ | : 07:42–09:18 |
| ಗುಳಿಕ ಕಾಲ | : 10:54–12:30 |

## ತುಂಗಭದ್ರಾ ನೀರಿನ ಮಟ್ಟ



ಮಂಗಳವಾರ : 20–08–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1625.13 ಅಡಿ |
| ಒಳ ಹರಿವು | 31033 ಕ್ಯುಸೆಕ್ |
| ಹೊರ ಹರಿವು | 10201 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 76.912 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1627.54 ಅಡಿ |
| ಒಳ ಹರಿವು | 706 ಕ್ಯುಸೆಕ್ |
| ಹೊರ ಹರಿವು | 10207 ಕ್ಯುಸೆಕ್ |
| ಸಾಮರ್ಥ್ಯ | 85.113 ಟಿಎಂಸಿ |

# ಗೇಟ್ ನಿರ್ವಹಣೆಗೆ ಸರ್ಕಾರ ನಿರ್ಲಕ್ಷ್ಯ

### ಶಾಸಕ ಕೆ.ನೇಮಿರಾಜ್‌ನಾಯ್ಕ್ ಆರೋಪ । ಮಾಲವಿ ಜಲಾಶಯ 10 ಗೇಟ್‌ಗಳು ರಿಪೇರಿ





**■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ರಾಜ್ಯದ ಯಾವುದೇ ಜಲಾಶಯಗಳ ಕ್ರಸ್ಟ್ ಗೇಟ್‌ಗಳ ಭವಿಷ್ಯ ಬಹುತೇಕ 40ರಿಂದ 50ವರ್ಷಗಳು, ಅವುಗಳ ನಿರ್ವಹಣೆಕೂಡ ಸರ್ಕಾರಗಳ ಹೊಣೆಯಾಗಿರುತ್ತೆ. ಆದರೆ, ಕ್ರಸ್ಟ್ ಗೇಟ್‌ಗಳ ರಿಪೇರಿ ಮಾಡಿಸುವಲ್ಲಿ ಸರ್ಕಾರದ ನಿರ್ಲಕ್ಷ್ಯವಿದೆ ಎಂದು ಶಾಸಕ ಕೆ.ನೇಮಿರಾಜ್ ನಾಯ್ಕ್ ರಾಜ್ಯ ಸರ್ಕಾರವನ್ನು ದೂರಿದರು.

ತಾಲೂಕಿನ ಮಾಲವಿ ಜಲಾಶಯದ ಮೂರ್‍ನಾಲ್ಕು ಗೇಟ್‌ಗಳು ರಿಪೇರಿ ಇದ್ದು, ತಹಸೀಲ್ದಾರ್ ಮತ್ತು ತಾಂತ್ರಿಕ ತಜ್ಞರ ತಂಡ ಮತ್ತು ರೈತರೊಂದಿಗೆ ಅವುಗಳ ವೀಕ್ಷಣೆಯ ಬಳಿಕ ಸುದ್ದಿಗಾರರೊಂದಿಗೆ ಸೋಮವಾರ ಸಂಜೆ ಅವರು ಮಾತನಾಡಿದರು. ಜಲಾಶಯದ ಮೇಲ್ಭಾಗದಲ್ಲಿ ಕಳೆದೆರಡು ದಿನಗಳಿಂದ ಸುರಿಯುತ್ತಿರುವ ಮಳೆಗೆ ಬಹುತೇಕ 10ಅಡಿಗಳಷ್ಟು ನೀರು ಸಂಗ್ರಹವಾಗಿದ್ದು, ಗೇಟ್‌ಗಳ ಮೂಲಕ ನೀರು ಪೋಲಾಗುತ್ತಿದೆ. ಅದನ್ನು ರಿಪೇರಿ ಮಾಡಿಸಲು ಸಾಗರದಿಂದ ತಜ್ಞರ ತಂಡವನ್ನು ಕರೆದು ರಿಪೇರಿಗೆ ಮುಂದಾಗಿದ್ದೇವೆ. ಇನ್ನೆರಡು ದಿನಗಳಲ್ಲಿ ರಿಪೇರಿಯಾಗಿ ನೀರು ವ್ಯರ್ಥವಾಗದಂತೆ ತಡೆಯಲಾಗುವುದು ಎಂದರು.

ಈ ಜಲಾಶಯ ನಿರ್ಮಾಣವಾಗಿ ಸುಮಾರು 56ವರ್ಷಗಳಾಗಿವೆ. ಅವುಗಳ ಗೇಟ್ ಈಗ ರಿಪೇರಿ ಬಂದಿವೆ. ಅದರಂತೆ ಇತ್ತೀಚಿಗೆ ತುಂಗಭದ್ರಾ ಜಲಾಶಯದ ಕ್ರಸ್ಟ್‌ಗೇಟ್ ಕಿತ್ತು ಹೋಗಿದ್ದು, ಸಾಕಷ್ಟು ನೀರು ವ್ಯರ್ಥವಾಗಿ ಹರಿದು ಹೋಗಿದೆ. ಇಂತಹ ಘಟನೆಗಳು ರಾಜ್ಯದೆಲ್ಲೆಡೆ ಆಗಬಾರದು. ಜಲಾಶಯಗಳ ನಿರ್ವಹಣೆಯ ಹೊಣೆ ಸರ್ಕಾರದ ಮೇಲಿರುತ್ತೆ. ಪ್ರತಿವರ್ಷ ಅವುಗಳ ನಿರ್ವಹಣೆಯಾದರೆ ಈ ರೀತಿ ಗೇಟ್‌ಗಳ ರಿಪೇರಿ ಬರುವುದಿಲ್ಲ ಎಂದರು. ಈ ಜಲಾಶಯದ ಗೇಟ್‌ಗಳು ತಾತ್ಕಲಿಕ ರಿಪೇರಿ ಯಲ್ಲಿದ್ದು, ಈ ವ್ಯಾಪ್ತಿಯ ರೈತರು ಯಾರು ಆತಂಕ ಪಡಬಾರದು ಎಂದು ಸ್ಥಳದಲ್ಲಿಯೇ ಇದ್ದ ರೈತರಿಗೆ ಧೈರ್ಯ ತುಂಬಿದರು. ಮುಂದೆ ಈ 10ಗೇಟ್‌ಗಳು ಸಹ ಸಂಪೂರ್ಣ ಬದಲಾವಣೆಯಾಗಬೇಕು ಎಂದು ಸರ್ಕಾರವನ್ನು ಆಗ್ರಹಿಸಿದರು.

ಈ ವೇಳೆ ನೀರಾವರಿ ಇಲಾಖೆಯ ಇಇ ಗಿರೀಶ್ ಮೇಟಿ, ಎಇಇ ಧರ್ಮರಾಜ್, ತಹಸೀಲ್ದಾರ್ ಆರ್.ಕವಿತಾ, ತಂತ್ರಜ್ಞಾನ ತಂಡದ ಶ್ರೀಧರ, ಜೆಡಿಎಸ್ ತಾಲೂಕು ಅಧ್ಯಕ್ಷ ವೈ. ಮಲ್ಲಿಕಾರ್ಜುನ, ಪುರಸಭೆ ಸದಸ್ಯ ನಾಗರಾಜ್ ಜನ್ನು, ಕೃಷ್ಣಮೂರ್ತಿ ಶೆಟ್ರು, ತಾಲೂಕಿನ ಮುಖಂಡರಾದ ಈ.ಕೆ.ಮೂರ್ತಿ, ಗುರುಬಸಪ್ಪ, ಚಿತ್ತವಾಡ್ಗಿ ಪ್ರಕಾಶ್, ಕೆ.ರೋಹಿತ್, ಹೋಟಲ್ ಸಿದ್ದರಾಜ್, ಬಿ.ಜಿ.ಬಡಿಗೇರ್, ಬಸವರಾಜ್ ಬಡಿಗೇರ್, ಬ್ಯಾಟಿ ನಾಗರಾಜ್, ಐನಳ್ಳಿ ಚಂದ್ರಶೇಖರ್, ಆಪ್ತ ಸಹಾಯಕ ದೊಡ್ಡಬಸಪ್ಪ ರೆಡ್ಡಿ ಮತ್ತಿತರರು ಇದ್ದರು.

# ಅರಸರು ಉಳುವವನೇ ಒಡೆಯ ಕಾಯ್ದೆ ಜಾರಿ ರೂವಾರಿ

### ತಹಶೀಲ್ದಾರ್ ಅಮರೇಶ್.ಜಿ.ಕೆ ಹೇಳಿಕೆ



**■ ಹಂಪಿ ಟೈಮ್ಸ್ ಕೊಟ್ಟೂರು**

ಮಾಜಿ ಮುಖ್ಯಮಂತ್ರಿಗಳು ಡಿ.ದೇವರಾಜ ಅರಸರು ಬಡವರ ಪರ ನಿಂತು."ಉಳುವವನೇ ಭೂಮಿ ಒಡೆಯ" ಕಾಯ್ದೆ ಮೂಲಕ ಶ್ರೀಮಂತರು ಮತ್ತು ಬಡವರ ಮಧ್ಯೆ ಇದ್ದ ಕಂದಕವನ್ನು ದೂರ ಮಾಡಿ ಹಿಂದುಳಿದ ವರ್ಗಗಳ ಧೀಮಂತ ನಾಯಕರಾಗಿದ್ದಾರೆ ಎಂದು ತಹಶೀಲ್ದಾರ ಅಮರೇಶ್ ಜಿ.ಕೆ ಹೇಳಿದರು.

ಪಟ್ಟಣದ ತಾಲೂಕ ಕಛೇರಿಯ ಮಹಾತ್ಮ ಗಾಂಧೀಜಿ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡ ಮಾಜಿ ಮುಖ್ಯಮಂತ್ರಿಗಳು ಡಿ.ದೇವರಾಜ ಅರಸು ಹಾಗೂ ನಾರಾಯಣ ಗುರುಗಳ ಜನ್ಮ ದಿನಾಚರಣೆಯ ಕಾರ್ಯಕ್ರಮದಲ್ಲಿ ಮಾತನಾಡಿದರು .

ಇಡೀ ದೇಶದಲ್ಲೇ ಅತ್ಯಂತ ಯಶಸ್ವಿ ಭೂ ಪುನರ್ವವಿಂಡಣೆ ಮಾಡಿದ ಕೀರ್ತಿಯನ್ನು ಅವರಿಗೆ ತಂದುಕೊಟ್ಟಿತು.ಹಿಂದುಳಿದ ವರ್ಗಗಳಿಗೆ ಸೇರಿದ ಜನರಿಗೆ ಶಿಕ್ಷಣದ ಮೇಲೆ ಒತ್ತುನೀಡಿ, ಆ ವರ್ಗದಿಂದ ಬಂದ ವಿದ್ಯಾರ್ಥಿಗಳಿಗೆ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಹಾಸ್ಟಲ್ಗಳನ್ನು ಸ್ಥಾಪಿಸಿ ಆ ಮೂಲಕ ಬಡ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಪಡೆಯಲು ಸಹಾಯವಾಗಿದೆ ಎಂದು ತಿಳಿಸಿದರು.

ಸಮಾಜ ಸುಧಾರಕರಾದ, ಸಮಾಜದ ತಾರತಮ್ಯವನ್ನು ಕಡಿಮೆ ಮಾಡಲು ಇಡೀ ಜೀವನವನ್ನೇ ಮುಡುಪಾಗಿಟ್ಟಿದ್ದ ಕೇರಳದ ಸಂತರಾದ ಶ್ರೀ ನಾರಾಯಣ ಗುರುದೇವರು. "ಒಂದೇ ಮತ, ಒಂದೇ ಜಾತಿ ಹಾಗೂ ಒಂದೇ ದೇವರು" ಎಂಬ ವಾಕ್ಯವನ್ನು ನೀಡಿದರು ಎಂದು ತಿಳಿಸಿದರು.

ಕೊಟ್ಟೂರಿನ ಬಿಸಿಎಂ ಹಾಸ್ಟಲ್ ವಿದ್ಯಾರ್ಥಿನಿಯರಾದ ಕುಮಾರಿ ಸಬಿಯಾ ಮತ್ತು ಎ ಎಂ ರಂಜಿತಾ ಡಿ.ದೇವರಾಜ ಅರಸುರವರ ಬದುಕು ಮತ್ತು ಸಾಧನೆ ಬಗ್ಗೆ ಮಾತನಾಡಿದರು.

ಕಾರ್ಯಕ್ರಮದಲ್ಲಿ ಉಪತಹಶೀಲ್ದಾರ್, ಅನ್ನದಾನೇಶ ಬಿ ಪತ್ತಾರ್, ಶಿರಸ್ತೇದಾರಾದ ರೇಖಾ, ಮಂಗಳ ಅರಮನೆ, ಗ್ರಾ ಆ ಅ ಹರೀಶ ಮತ್ತು ಕಛೇರಿಯ ಸಿಬ್ಬಂದಿಯವರು ಮತ್ತು ಬಿಸಿಎಂ ವಾರ್ಡ್ ನ ಬಸವರಾಜ, ಶಿವಲೀಲಾ, ಅಡಿಗೆಯವರಾದ ಗೌರಮ್ಮ, ವಿಜಯಲಕ್ಷ್ಮಿ, ಹೌಸೀಫ್, ಜಾನ್, ನಾಗರಾಜ ಹಾಗೂ ಕೊಟ್ಟೂರಿನ ಬಿಸಿಎಂ ಹಾಸ್ಟಲ್ ವಿದ್ಯಾರ್ಥಿಗಳು ಹಾಜರಿದ್ದರು.

# ಅರೆ ಅಲೆಮಾರಿ ಅಭಿವೃದ್ಧಿ ನಿಗಮದಿಂದ ಅರ್ಜಿ ಆಹ್ವಾನ

**■ ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮದಿಂದ 2024–25ನೇ ಸಾಲಿನ ವಿವಿಧ ಯೋಜನೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಹಿಂದುಳಿದ ವರ್ಗಗಳ ಅರ್ಜಿದಾರರು ಅರ್ಜಿಗಳನ್ನು ಸೇವಾಸಿಂಧು ಪೋರ್ಟಲ್ http://sevasindhu.karnataka.gov.in ಮತ್ತು ನಿಗಮದ ವೆಬ್‌ಸೈಟ್ www.kaadc.gov.in ಇಲ್ಲಿ ಆನ್‌ಲೈನ್ ಮೂಲಕ ಅಗಸ್ಟ್ 31 ರೊಳಗಾಗಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ನಿಗಮದ ವಿಜಯನಗರ ಜಿಲ್ಲೆ ತಾಲ್ಲೂಕ ಕಛೇರಿ, 1ನೇ ಮಹಡಿ, ರೂಮ್ ನಂ:04, ಜಿಲ್ಲಾ ವ್ಯವಸ್ಥಾಪಕರ ಕಚೇರಿಗೆ ಭೇಟಿ ನೀಡಿ ಮಾಹಿತಿ ಪಡೆದುಕೊಳ್ಳಬಹುದಾಗಿದೆ ಎಂದು ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪಾರ್ಧಿ ಅಪರೂಪದ ಬುಡಕಟ್ಟು

### ಕನ್ನಡ ವಿಶ್ವವಿದ್ಯಾಲಯ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಹೇಳಿಕೆ
### ಸಂಶೋಧನೆಯಿಂದ ಅವುಗಳ ಇರುವಿಕೆಯನ್ನು ತೋರಿಸಿಕೊಡಬೇಕು

**■ ಹಂಪಿ ಟೈಮ್ಸ್ ಹೊಸಪೇಟೆ**




ಕರ್ನಾಟಕ ಒಳಗೊಂಡಂತೆ ಭಾರತದಲ್ಲಿ ನಮಗೆ ಗೋಚರಿಸದ ಅನೇಕ ಅಪರೂಪದ ಬುಡಕಟ್ಟುಗಳಿವೆ. ಇಂತಹ ಬುಡಕಟ್ಟುಗಳ ಕುರಿತು ಸಂಶೋಧನೆ ಕೈಗೊಳ್ಳುವ ಮೂಲಕ ಸಮಾಜದಲ್ಲಿ ಅವುಗಳ ಇರುವಿಕೆಯನ್ನು ತೋರಿಸಿಕೊಡಬೇಕು ಎಂದು ಕನ್ನಡ ವಿವಿ ಕುಲಪತಿ ಡಾ. ಡಿ.ವಿ. ಪರಮಶಿವಮೂರ್ತಿ ಹೇಳಿದರು.

ಕನ್ನಡ ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ವಿಭಾಗದಲ್ಲಿ ಸೋಮವಾರ ಆಯೋಜಿಸಿದ್ದ ಸಮಾಜ ಮುಖಿ ತಿಂಗಳ ಮಾತು ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದರು. ಪಾರ್ಧಿ ಎಂಬುದು ಅಪರೂಪದ ಬುಡಕಟ್ಟು. ಈ ಬುಡಕಟ್ಟು ಸಮುದಾಯದಲ್ಲಿ ಸಮಾಜವು ಅಳವಡಿಸಿ ಕೊಳ್ಳುವಂತಹ ಅನೇಕ ಉತ್ತಮ ಅಂಶಗಳನ್ನು ಹೊಂದಿರುವುದು ಪ್ರಶಂಸನೀಯ ಎಂದರು. ಈ ಸಮುದಾಯದಲ್ಲಿ ಅಪರಾಧ ಪ್ರಕರಣಗಳ ವಿಚಾರಣೆಗೆ ಅಗ್ನಿ ದಿವ್ಯ, ಮುಳ್ಳು ದಿವ್ಯ, ಜಲದಿವ್ಯ ಎಂಬ ಸಪ್ತದಿವ್ಯಗಳ ಮೂಲಕ ನ್ಯಾಯದ ನಿರ್ಣಯವನ್ನು ಮಾಡುತ್ತಿರುವುದು ಗಮನಾರ್ಹ ಎಂದರು.

ಸಂಶೋಧನಾರ್ಥಿ ಎಚ್.ಎಸ್.ವಿಕಾಸ್ ಪಾರ್ಧಿ ಬುಡಕಟ್ಟಿನ ಸಾಮಾಜಿಕ ಸಂಕಥನ ಎಂಬ ಸಂಶೋಧನಾ ವಿಷಯವನ್ನು ಮಂಡಿಸಿ ಮಾತನಾಡಿದರು. ಬ್ರಿಟಿಷ್ ಕಾಲದಲ್ಲಿ ಪಾರ್ಧಿ ಬುಡಕಟ್ಟು ಸೇರಿದಂತೆ ಇತರೆ ಬುಡಕಟ್ಟು ಸಮುದಾಯಗಳನ್ನು ನಿಯಂತ್ರಿಸಲು ಅಪರಾಧಿ ಬುಡಕಟ್ಟುಗಳ ಕಾಯ್ದೆ–1871ನ್ನು ಜಾರಿಗೆ ತರಲಾಯಿತು. ಸ್ವಾತಂತ್ರ್ಯ ನಂತರದಲ್ಲಿ ಭಾರತ ಸರ್ಕಾರ 1952 ರಲ್ಲಿ ಈ ಕಾಯ್ದೆಯನ್ನು ರದ್ದುಗೊಳಿಸಿ, ಅಪರಾಧಿ ಎಂಬ ಹಣೆಪಟ್ಟಿಯಿಂದ ಸಮುದಾಯಗಳನ್ನು ವಿಮುಕ್ತಗೊಳಿಸಿದರು. ಆದರೆ ಸಮಾಜದಲ್ಲಿ ಇಂದಿಗೂ ಈ ಸಮುದಾಯಗಳನ್ನು ನೋಡುವ ದೃಷ್ಟಿಕೋನ ಬದಲಾಗಿಲ್ಲ ಎಂದರು.

ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ವಿಭಾಗದ ಮುಖ್ಯಸ್ಥ ಡಾ ಈ.ಯರ್ರಿಸ್ವಾಮಿ ಪ್ರಾಸ್ತಾವಿಕ ಮಾತನಾಡಿದರು. ವಿವಿಧ ವಿಭಾಗಗಳ ಪ್ರಾಧ್ಯಾಪಕರು, ಸಂಶೋಧನಾರ್ಥಿಗಳು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಸಂಶೋಧನಾರ್ಥಿ ಮೋಹನ್‌ಕುಮಾರ್, ವಿರೂಪಾಕ್ಷ, ರಾಜು ನಿರ್ವಹಿಸಿದರು.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi — ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಗಣಿತ

## ಸಮಾಂತರ ಶ್ರೇಢಿಗಳು

**ಮೊದಲ ಪದವನ್ನು ಹೊರತುಪಡಿಸಿ ಪ್ರತಿಯೊಂದು ಪದವವನ್ನು ಪಡೆಯಲು ಅದರ ಹಿಂದಿನ ಪದಕ್ಕೆ ಒಂದು ನಿರ್ದಿಷ್ಟ ಸಂಖ್ಯೆಯನ್ನು ಕೂಡಿಸುವುದರಿಂದ ಪಡೆಯುವ ಸಂಖ್ಯಾ ಪಟ್ಟಿಯೇ ಸಮಾಂತರ ಶ್ರೇಢಿ**

ಉದಾ : 3 , 7 , 11 , 15 ………..

ಇಲ್ಲಿ ಮೊದಲ ಸಂಂಖ್ಯೆಯನ್ನು ಮೊದಲ ಪದ $a_1 = a$ ಎನ್ನುವರು.

ಹಿಂದಿನ ಪದಕ್ಕೆ ನಿರ್ದಿಷ್ಟ ಸಂಖ್ಯೆಯನ್ನು ಕೂಡಿಸುವುದು ಸಾಮಾನ್ಯ ವ್ಯತ್ಯಾಸ $\mathbf{d} = a_2 - a_1 = a_3 - a_2 = a_4 - a_3$ ಎನ್ನುವರು.

ಉದಾ : ಒಂದು ಸಮಾಂತರ ಶ್ರೇಢಿಯ nನೇ ಪದ $a_n=3n+1$ ಆದಾಗ ಆ ಶ್ರೇಢಿಯ 4ನೇ ಪದವನ್ನು ಕಂಡುಹಿಡಿಯಿರಿ.

$a_n=3n+1$
$a_4=3(4)+1 = 12 + 1 = 13$

2) ಒಂದು ಸಮಾಂತರ ಶ್ರೇಢಿಯ nನೇ ಪದ $a_n=2n+1$ ಆದಾಗ ಆ ಶ್ರೇಢಿಯ ಸಾಮಾನ್ಯ ವ್ಯತ್ಯಾಸ ಕಂಡುಹಿಡಿಯಿರಿ.(ಏಪ್ರಿಲ್ 2020)

ಸಮಾಂತರ ಶ್ರೇಢಿಯ nನೇಪದವನ್ನು ಕಂಡುಹಿಡಿಯುವ ಸೂತ್ರ

$$a_n = a + (n-1)\, d$$

ಉದಾ 1 : 3, 7, 11, 15…ಸಮಾಂತರ ಶ್ರೇಢಿಯ 16 ನೇ ಪದವನ್ನು ಕಂಡುಹಿಡಿಯಿರಿ.

$a = 3, \quad d= 7-3 = 4, \quad n= 16 \quad a_{16} = ?$
$a_n = a + (n-1)\, d$
$a_{16} = 3 + (16-1)\, 4 = 3 + (15)\, 4 = 3 + 60 = 63$

ಅದೇ ರೀತಿ ಪ್ರಯತ್ನಿಸಿ

2)4,7,10…….ಈ ಸಮಾಂತರ ಶ್ರೇಢಿಯ 20ನೇ ಪದವನ್ನು ಸೂತ್ರ ಉಪಯೋಗಿಸಿ ಕಂಡುಹಿಡಿಯಿರಿ. (ಏಪ್ರೀಲ್ 2023)

3) 7,11,15…….ಈ ಸಮಾಂತರ ಶ್ರೇಢಿಯ 30ನೇ ಪದವನ್ನು ಸೂತ್ರ ಉಪಯೋಗಿಸಿ ಕಂಡುಹಿಡಿಯಿರಿ. (ಮಾದರಿ ಪತ್ರಿಕೆ 2023)

4)6,10,14…….ಈ ಸಮಾಂತರ ಶ್ರೇಢಿಯ 15ನೇ ಪದವನ್ನು ಸೂತ್ರ ಉಪಯೋಗಿಸಿ ಕಂಡುಹಿಡಿಯಿರಿ. (ಮಾದರಿ ಪತ್ರಿಕೆ 2022)

5)10,15,20…….ಈ ಸಮಾಂತರ ಶ್ರೇಢಿಯ 20ನೇ ಪದವನ್ನು ಸೂತ್ರ ಉಪಯೋಗಿಸಿ ಕಂಡುಹಿಡಿಯಿರಿ. (ಏಪ್ರೀಲ್ 2022)

**ಸಮಾಂತರ ಶ್ರೇಢಿಯ nನೇ ಪದಗಳವರೆಗಿನ ಮೊತ್ತವನ್ನು ಕಂಡುಹಿಡಿಯುವ ಸೂತ್ರ :** $S_n = \frac{n}{2}[2a + (n-1)\, d]$

**ಮೊದಲ ಮತ್ತು ಕೊನೆ ಪದವನ್ನು ಕೊಟ್ಟಾಗ** $S_n = \frac{n}{2}[a+l]$

**ಮೊದಲ ಮತ್ತು nನೇ ಪದವನ್ನು ಕೊಟ್ಟಾಗ** $S_n = \frac{n}{2}[a+a_n]$

**ಮೊದಲ ಸ್ವಾಭಾವಿಕ ಸಂಖ್ಯೆಗಳ ಮೊತ್ತ** $S_n = \frac{n(n+1)}{2}$

**ಮೊದಲ ಸರಿ ಸ್ವಾಭಾವಿಕ ಸಂಖ್ಯೆಗಳ ಮೊತ್ತ** $S_n = n(n+1)$

**ಮೊದಲ ಬೆಸ ಸ್ವಾಭಾವಿಕ ಸಂಖ್ಯೆಗಳ ಮೊತ್ತ** $S_n = n^2$

1)5+8+11 …ಈ ಸಮಾಂತರ ಶ್ರೇಢಿಯ 10ನೇ ಪದಗಳವರೆಗಿನ ಮೊತ್ತವನ್ನು ಸೂತ್ರ ಉಪಯೋಗಿಸಿ ಕಂಡುಹಿಡಿಯಿರಿ.

$a = 5, d = 8 - 5 = 3, n=10, S_{10} = ?$
$S_n = \frac{n}{2}[2a + (n-1)\, d]$
$S_{10} = \frac{10}{2}[2x\,5 + (10-1)\, 3]$
$S_{10} = 5[10+(9)3]$
$S_{10} = 5[10+27] = 5[37] = 185$

2)5+10+15 …ಈ ಸಮಾಂತರ ಶ್ರೇಢಿಯ ಮೊದಲ 20 ಪದಗಳ ಮೊತ್ತವನ್ನು ಸೂತ್ರ ಉಪಯೋಗಿಸಿ ಕಂಡುಹಿಡಿಯಿರಿ.(ಸೆಪ್ಟಂಬರ್ 2020)

3) ಮೊದಲ 20 ಧನ ಪೂರ್ಣಾಂಕಗಳ ಮೊತ್ತವನ್ನು ಸೂತ್ರ ಉಪಯೋಗಿಸಿ ಕಂಡುಹಿಡಿಯಿರಿ

4) 3+6+9 …ಈ ಸಮಾಂತರ ಶ್ರೇಢಿಯ ಮೊದಲ 15 ಪದಗಳ ಮೊತ್ತವನ್ನು ಸೂತ್ರ ಉಪಯೋಗಿಸಿ ಕಂಡುಹಿಡಿಯಿರಿ.(ಮಾದರಿ ಪತ್ರಿಕೆ 2021)

(ಮುಂದುವರೆಯುವುದು)

ಮಾರ್ಗದರ್ಶಿ ಶಿಕ್ಷಕರು : **ಎಂ.ಎಸ್.ಮಂಜುನಾಥ,** ಶಿಕ್ಷಕರು, ಹಗರಿಬೊಮ್ಮನಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಸಾಯಿಮಣಿ ಪ್ರಕಾಶನ, ಹೊಸಪೇಟೆ

# ನೂತನ ಅಧ್ಯಕ್ಷರಾಗಿ ವಿವೇಕಾನಂದ, ಉಪಾಧ್ಯಕ್ಷರಾಗಿ ಗಾಯಿತ್ರೀ ದೇವಿ ಆಯ್ಕೆ



**■ ಹಂಪಿ ಟೈಮ್ಸ್ ಕೊಟ್ಟೂರು**

ಪಟ್ಟಣದ ವೀರಶೈವ ಪತ್ತಿನ ಸಹಕಾರ ಸಂಘ ನಿಯಮಿತ ಬ್ಯಾಂಕಿನ ನೂತನ ಅಧ್ಯಕ್ಷರಾಗಿ ಕೆ.ವಿವೇಕಾನಂದ ಹಾಗೂ ಉಪಾಧ್ಯಕ್ಷರಾಗಿ ಗಾಯಿತ್ರೀ ದೇವಿ ಈರ್ವರೂ ಮಂಗಳವಾರ ಅವಿರೋಧವಾಗಿ ಆಯ್ಕೆಯಾದರು.

ಚುನಾವಣೆ ಅಧಿಕಾರಿ ಬಿ.ಮಾನಸ ಅಧ್ಯಕ್ಷ–ಉಪಾಧ್ಯಕ್ಷರ ಸ್ಥಾನಗಳನ್ನು ಘೋಷಣೆ ಮಾಡಿದರು.ಈ ವೇಳೆ ನಿರ್ದೇಶಕ ಸಿ.ಬಿ.ಕೊಟ್ರೇಶಪ್ಪ, ಎಂ.ಶಿವಣ್ಣ, ಎಸ್. ಕೊಡದಪ್ಪ, ಹೆಚ್.ಪ್ರಕಾಶ, ಬಿ.ಪಂಪಾಪತಿ, ಡಿ.ಶಿವಚರಣ, ಲೀಲಾ ಹಾಜರಿದ್ದರು.

ಉಪಾಧ್ಯಕ್ಷೆ ಗಾಯತ್ರೀ ಅಶೋಕ, ಪಂಚಮಸಾಲಿ ಸಮಾಜದ ತಾಲೂಕು ಘಟಕ ಅಧ್ಯಕ್ಷರು ಚಾಪಿ ಚಂದ್ರಪ್ಪ,ಪಂಚಮಸಾಲಿ ಮುಖಂಡ ನೀಲಕಂಠಪ್ಪ, ಖಾನಾವಳಿ ಶಿವಕುಮಾರ್ ಮಾತನಾಡಿದರು. ಭರಮನಗೌಡ ಸ್ವಾಗತಿಸಿ, ವಂದಿಸಿದರು.

ಈ ವೇಳೆ ಪಂಚಮಸಾಲಿ ಸಮಾಜದ ತಾಲೂಕು ಘಟಕದ ಕಾರ್ಯದರ್ಶಿ ಆರ್. ಅಶೋಕ್, ಮುಖಂಡರು ಅಂಗಡಿ ಪಂಪಾಪತಿ, ಅನೀಲ್ ಹೊಸಮನಿ, ಸಿ.ಶಿವಪ್ರಕಾಶ್, ಅಶೋಕ್ ಎಂಜಿನಿಯರ್, ಬೇಲಿಗೌಡ್ರ ಸೋಮಣ್ಣ, ಡಿ.ಕೊಟ್ರೇಶಪ್ಪ, ಕೆ.ಬಿ ಮಲ್ಲಿಕಾರ್ಜುನ, ಪಂಚಮಸಾಲಿ ಸಮಾಜದ ನಿವೃತ್ತ ಉಪ ತಹಶಿಲ್ದಾರ ನಾಗರಾಜ್, ಕೆ.ಶಿವಕುಮಾರ್ ಗೌಡ, ಕಾರ್ಯದರ್ಶಿ ಮುದುಕಪ್ಪ, ಪಿಗ್ಮಿ ಏಜೆಂಟ್ ಪ್ರಕಾಶ್, ಕೊಟ್ರೇಶ್ ಸೇರಿದಂತೆ ಪಂಚಮಸಾಲಿ ಸಮಾಜದ ಅನೇಕ ಮುಖಂಡರು, ಯುವಕರು ಹಾಜರಿದ್ದರು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
No. 1 ಜಿಲ್ಲೆಯ ದಿನಪತ್ರಿಕೆ
Place your ads here reach more readers
Why Choose Us?
• Experienced Professionals
• Fast and Reliable Service
• Customized Solutions
• Competitive Pricing
E-mail: hampitimes@gmail.com
www.hampitimes.com
epaper.hampitimes.com
9448633038

**CHANGE OF NAME**
I **AZMAT UNNISA BEGUM** W/o Mohammed Arif (New Name) Perviously called **AZAMATUNNISABEGUM** (Old Name) R/o H.No.283, 14th Ward, Near: Uramma Temple, Thimmanatha Keri, at Post Kamalapur, Taluk Hospet, Dist Vijayanagara-583221
I have changed my name **AZAMATUNNISABEGUM** To **AZMAT UNNISA BEGUM** (New Name) Vide affidavit before Notary Public T Hanumanthappa Hosapete Dated on 20/08/2024

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055